# 1:21-24

# ಕ್ರಿಸ್ತನ ಮುಖಾಂತರ ಸಂಧಾನ

21 ರಿಂದ 23 ವಚನಗಳಲ್ಲಿ, ಪೌಲನು ಹಿಂದಿನ ಕಾಲದಲ್ಲಿ ಕೊಲೊಸ್ಸೆಯವರಿದ್ದ ನಾಶನದ ಸ್ಥಿತಿಯನ್ನು ಕುರಿತು ಚರ್ಚಿಸಿದನು. ಯೇಸುವಿನ ಮರಣದ ಮೂಳಕ ಅವರಿಗೆ ಸಂಧಾನ ಉಂಟಾದದ್ದರಿಂದ, ಅವರು ನಂಬಿಕೆಯಲ್ಲಿ ನೆಲೆಗೊಳ್ಳುವದಾದರೆ ದೇವರ ಮುಂದೆ ಪರಿಶುದ್ಧರೂ ನಿಷ್ಕಳಂಕರೂ ಆಗಿ ನಿಲ್ಲಿಸಲ್ಪಡುವರು.

## ಅವರ ಹಿಂದಿನ ಸ್ಥಿತಿ (1:21)

**[21]ಇದಲ್ಲದೆ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷಮನಸ್ಸುಳ್ಳವರೂ ಆಗಿದ್ದರೂ.**

### "ಇದಲ್ಲದೆ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷಮನಸ್ಸುಳ್ಳವರೂ ಆಗಿದ್ದರೂ"

ಮೊದಲು ಪೌಲನು ಈ ಕೆಳಗಿನ ಮಾತುಗಳ ಮೂಲಕ ಅವರ ಹಿಂದಿನ ಸ್ಥಿತಿಯ ಬಗ್ಗೆ ವರ್ಣಿಸುತ್ತಾನೆ: **ಇದಲ್ಲದೆ ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರಾಗಿ ದ್ವೇಷಮನಸ್ಸುಳ್ಳವರೂ ಆಗಿದ್ದರೂ.** ಈ ವಚನದಲ್ಲಿ ಹೊರತು ಪಡಿಸಿ, "ಅನ್ಯರೂ" (ἀπαλλοτριόω, *apallotrioō*) ಎಂಬುದು ಎಫೆಸ 2:12 ಮತ್ತು 4:18ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು "ಹೊರಗಿಡಲ್ಪಟ್ಟ" ಎಂದು ಅನುವಾದಿಸಲ್ಪಟ್ಟಿದೆ. ಎಫೆಸದವರಿಗೆ ಪತ್ರಿಕೆಯಲ್ಲಿ ಅದು ನಿರ್ದಿಷ್ಟವಾಗಿ ಅನ್ಯಜನರಿಗೆ ಅನ್ವಯವಾಗುತ್ತದೆ, ಆದರೆ ಇಲ್ಲಿ ಅದು ಕೊಲೊಸ್ಸೆಯವರ ಅನ್ಯೋನ್ಯತೆಯಲ್ಲಿದ್ದ ವಿವಿಧ ಹಿನ್ನಲೆಯುಳ್ಳವರಿಗೆ ಒಂದು ವ್ಯಾಪಕವಾದ ಅನ್ವಯಿಕೆಯನ್ನು ಹೊಂದಿರುತ್ತದೆ (ಕೊಲೊಸ್ಸೆ 3:11). "ದ್ವೇಷ" (ἐχθρός, *echthros*) ಎಂಬುದು ಅನೇಕ ಸಾರಿ "ವೈರಿ" ಎಂದು ಅನುವಾದಿಸಲ್ಪಟ್ಟಿರುತ್ತದೆ (ಮತ್ತಾಯ 5:43). ಹಿಂದಿನ ಕಾಲದಲ್ಲಿ, ಕೊಲೊಸ್ಸೆಯವರು ದೇವರಿಂದ ಬೇರ್ಪಟ್ಟವರಾಗಿದ್ದರು. ಆತನ ಕಡೆಗೆ ದ್ವೇಷಮನಸ್ಸುಳ್ಳವರಾಗಿದ್ದರು — ದೇವರ ಬಯಕೆಯ ಕಾರಣದಿಂದಾಗಿ ಅಲ್ಲ, ಆದರೆ ಅವರು ಸ್ವತಃ ಆತನಿಗೆ ವಿರುದ್ಧ ಬಂಡಾಯವೆದ್ದಿದ್ದರಿಂದಲೇ ಆಗಿತ್ತು.

ಅವರ ಮನೋಭಾವವು ಅವರನ್ನು ಅನೇಕ ಪಾಪಕೃತ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ನಡಿಸಿತ್ತು, ಹೀಗೆ ಅವರು ಬೇರೆ ಎಲ್ಲರಂತೆಯೇ (ರೋಮಾ 3:23), ಪಾಪದ ಕಾರಣದಿಂದಾಗಿ ದೇವರಿಂದ ಬೇರ್ಪಡಿಸಲ್ಪಟ್ಟಿದ್ದರು (ಯೆಶಾಯ 59:1, 2). ಅವರ ಬಂಡಾಯದ ಮನಸ್ಸುಗಳ

ಕಾರಣದಿಂದ, ಅವರು ದೇವರಿಂದ ಹಿಂದಕ್ಕೆ ಸರಿದಿದ್ದರು, ಇದರಿಂದ ದೇವರು ಅವರಿಂದ ಹಿಂದಕ್ಕೆ ಸರಿಯುವಂತೆ ಮಾಡಿದ್ದರು. ಭಕ್ತಿಹೀನ ಆಲೋಚನೆಯು ಉದ್ಧಟತನದ ಕೃತ್ಯಗಳಿಗೆ ದಾರಿ ಮಾಡುತ್ತದೆ. ಫಲಿತವೇನೆಂದರೆ ತನ್ನ ಕಡೆಗೆ ದ್ವೇಷದಿಂದ ನಡೆದುಕೊಳ್ಳುವವರಿಗೆ ದೇವರು ದ್ವೇಷದಿಂದಲೇ ಪ್ರತ್ಯುತ್ತರ ನೀಡುತ್ತಾನೆ (ಯಾಜಕಕಾಂಡ 26:21, 23, 24, 27, 28, 40, 41). ಒಂದು ಪ್ರಾಪಂಚಿಕ ಮನೋರೂಢಿಯು ಯೇಸುವಿನಿಂದ ಸಾಧ್ಯಗೊಳಿಸಲ್ಪಟ್ಟ ಸಂಧಾನವನ್ನು ಸ್ವೀಕರಿಸಿಕೊಳ್ಳುವದನ್ನು ಕಠಿಣಗೊಳಿಸುತ್ತದೆ.

"ಮನಸ್ಸು" (διάνοια, *dianoia*) ಎಂಬುದನ್ನು ತಿಳುವಳಿಕೆ ಮತ್ತು ಯೋಚನೆಯ ಮೂಲ ಎಂದು ಪರಿಗಣಿಸಬಹುದು. ಅದು ಕೆಲವು ಸಾರಿ *kardia* ಎಂಬುದರೊಂದಿಗೆ ಸಮಾನಾರ್ಥಕವಾಗಿರುತ್ತದೆ, ಅದು ಒಳ್ಳೆಯ ಅಥವಾ ಕೆಟ್ಟ ಕೃತ್ಯಗಳ ಮೂಲ ಆಗಿರಬಹುದಾಗಿದೆ. ಕೆಟ್ಟ ಕೃತ್ಯಗಳು ಕೆಟ್ಟ ಆಲೋಚನೆಗಳೊಂದಿಗೆ ಸಂಬಂಧ ಹೊಂದಿರುತ್ತವೆ (ಆದಿಕಾಂಡ 8:21; ಕೀರ್ತನೆ 10:3, 4).

ದೇವರ ಅಸ್ತಿತ್ವದ ಬಗ್ಗೆ ಅನ್ಯಜನರ ಬಳಿ ಸಾಕಷ್ಟು ಪುರಾವೆಗಳಿದ್ದಾಗ್ಯೂ, ಅವರು ದೇವರ ವಾಸ್ತವಿಕತೆಯನ್ನು ಅಂಗೀಕರಿಸಿಕೊಳ್ಳಲು ನಿರಾಕರಿಸಿದರು (ರೋಮಾ 1:19, 20). ಅವರು ದೇವರನ್ನು ತಿರಸ್ಕರಿಸಿದ್ದು ಇಚ್ಛಾಪೂರ್ವಕವಾಗಿಯೇ ಆಗಿತ್ತು (ರೋಮಾ 1:28). ಪೌಲನು ಹೀಗೆ ಬರೆಯುತ್ತಾನೆ,

> ಆದದರಿಂದ ಅನ್ಯಜನರು ನಡೆದುಕೊಳ್ಳುವ ಪ್ರಕಾರ ನೀವು ಇನ್ನು ಮೇಲೆ ನಡೆದುಕೊಳ್ಳಬಾರದೆಂದು ಕರ್ತನಲ್ಲಿರುವವನಾಗಿ ನಿಮಗೆ ಖಂಡಿತವಾಗಿ ಹೇಳುತ್ತೇನೆ. ಅವರು ನಿಷ್ಪ್ರಯೋಜನವಾದ ಬುದ್ಧಿಯುಳ್ಳವರಾಗಿ ನಡೆದುಕೊಳ್ಳುತ್ತಾರೆ; ಅವರ ಮನಸ್ಸು ಮೊಬ್ಬಾಗಿ ಹೋಗಿದೆ, ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ (ಎಫೆಸ 4:17, 18).

ಅವರು ದೇವರನ್ನು ತಮ್ಮ ಆಲೋಚನೆಯಿಂದ ಹೊರಗೆ ಇಟ್ಟ ಕಾರಣದಿಂದಾಗಿ ಅವರು ದುಷ್ಟರಾದರು (ರೋಮಾ 1:28-32).

ದುಷ್ಕೃತ್ಯಗಳನ್ನು ನಡಿಸುವವರು ದೇವರಿಗೆ ವೈರಿಗಳಾಗಿದ್ದಾರೆ. ಯಾಕೋಬನು ಹೀಗೆ ಬರೆಯುತ್ತಾನೆ, "ವ್ಯಭಿಚಾರಿಗಳು ನೀವು; ಇಹಲೋಕಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ" (ಯಾಕೋಬ 4:4). ದೇವರು ಯೇಸುವಿನ ಯಜ್ಞದ ಮೂಲಕವಾಗಿ ತನ್ನ ವೈರಿಗಳಿಗೆ ಸಂಧಾನವಾಗುವದನ್ನು ಸಾಧ್ಯವಾಗಿಸಿದನು. "ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು ಮತ್ತೂ ನಿಶ್ಚಯವಲ್ಲವೇ" (ರೋಮಾ 5:10).

ದೇವರು ಪಾಪವನ್ನು ಮತ್ತು ಬಂಡಾಯತನವನ್ನು ದ್ವೇಷಿಸುತ್ತಾನೆಂಬ ವಾಸ್ತವಾಂಶದ ಮೇಲೆಯೇ ಸಂಧಾನಗೊಳ್ಳುವ ಅಗತ್ಯತೆಯು ಆಧಾರಗೊಂಡಿರುತ್ತದೆ (ಕೀರ್ತನೆ 5:5; 11:5; ಜ್ಞಾನೋಕ್ತಿ 6:16, 19; ಯೆರೆಮೀಯ 12:8; ಇಬ್ರಿಯ 1:9). ದುಷ್ಕೃತ್ಯ ನಡಿಸುವವರು ಮೊಂಡುತನದಿಂದ ಆತನ ಚಿತ್ತವನ್ನು ತಿರಸ್ಕರಿಸುತ್ತಲೇ ಇರುವದಾದರೆ, ಆತನು ಅವರನ್ನು

ದ್ವೇಷಿಸುವನು ಮತ್ತು ಇನ್ನು ಮೇಲೆ ಅವರನ್ನು ಪ್ರೀತಿ ಮಾಡುವದಿಲ್ಲ (ಹೋಶೇಯ 9:15). ಯೇಸುವಿಗೆ ವಿಧೇಯರಾಗದವರ ಮೇಲೆ ಮತ್ತು ಸತ್ಯವನ್ನು ಹಿಂಬಾಲಿಸದವರ ಮೇಲೆ ಆತನ ಕೋಪವು ಯಾವಾಗಲೂ ನೆಲೆಗೊಳ್ಳುವದು (ಯೋಹಾನ 3:36; ರೋಮಾ 1:18; 2:5, 8; ಎಫೆಸ 5:6; ಕೊಲೊಸ್ಸೆ 3:6).

ದೇವರ ನ್ಯಾಯವುಳ್ಳವನಾಗಿರುವದರಿಂದ ಪಾಪವನ್ನು ದಂಡಿಸುವದು ಅಗತ್ಯವಾಗಿರುತ್ತದೆ. ಈ ಅಗತ್ಯತೆಯು ಯೇಸುವಿನ ಮರಣದ ಮೂಲಕ ಸಂತೃಪ್ತಗೊಳಿಸಲ್ಪಟ್ಟದ್ದರಿಂದಾಗಿ, ದೇವರು ಯೇಸುವಿಗೆ ವಿಧೇಯರಾಗುವವರನ್ನು ಸ್ವೀಕರಿಸಿಕೊಳ್ಳಲು ಸಿದ್ಧನಿರುತ್ತಾನೆ (ಇಬ್ರಿಯ 5:9). ದೇವರು ಪಾಪಿಗಳನ್ನು ತನಗೆ ಸಂಧಾನಪಡಿಸಿಕೊಳ್ಳುವದಕ್ಕಾಗಿ ಇಷ್ಟೆಲ್ಲಾ ಮಾಡಿರುವಾಗ, ಅವರು ತಮ್ಮ ದ್ವೇಷಮನಸ್ಸುಗಳನ್ನು ಬಿಟ್ಟವರಾಗಿ ಸಂಧಾನಕ್ಕಾಗಿ ಅಪೇಕ್ಷಿಸುವವರಾಗತಕ್ಕದ್ದು.

## ಕ್ರಿಸ್ತನ ಮರಣದ ಮುಖಾಂತರ ಅವರಿಗೆ ಸಂಧಾನ (1:22)

**22ಆಗಿದ್ದರೂ ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ; ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ.**

### "ಆಗಿದ್ದರೂ ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ"

ಕೊಲೊಸ್ಸೆಯವರು ದೇವರ ವಿರುದ್ಧವಾಗಿ ದ್ವೇಷಮನಸ್ಸುಳ್ಳವರಾಗಿ ಇದ್ದಾಗ್ಯೂ ಮತ್ತು ಅವರ ಮೇಲೆ ಆತನ ಕೋಪವು ಇದ್ದಾಗ್ಯೂ, ಯೇಸುವು ತನ್ನ ಮರಣದ ಮೂಲಕ ಸ್ನೇಹವನ್ನು ಸಾಧ್ಯಗೊಳಿಸಿದನು. ಪೌಲನು **ಆಗಿದ್ದರೂ ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ** ಎಂದು ಹೇಳುತ್ತಾನೆ. ಈ ಯೋಚನೆಯು 20ನೇ ವಚನದಲ್ಲಿರುವ ಪದಗುಚ್ಛಕ್ಕೆ ಸಂಬಂಧ ಹೊಂದಿರುತ್ತದೆ: "ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ಸಮಾಧಾನವನ್ನು ಉಂಟುಮಾಡಿ."

ಯೇಸುವಿನ ಮರಣದಿಂದ ಎರಡು ಕಾರ್ಯಗಳು ಸಾಧಿಸಲ್ಪಟ್ಟವು: (1) ಆತನು ಸಂಧಾನಕ್ಕೆ ಅಡೆತಡೆಯಾಗಿದ್ದಂಥ ಪಾಪವನ್ನು ತೊಲಗಿಸಿದನು, ಮತ್ತು (2) ತನ್ನ ಕನಿಕರ ಮತ್ತು ಪ್ರೀತಿಯ ಮೂಲಕ, ದ್ವೇಷಮನಸ್ಸುಳ್ಳವರು ದೇವರ ನಿಷ್ಠೆಯುಳ್ಳ ಮಿತ್ರರಾಗುವಂತೆ ಅವರಿಗೆ ಪ್ರೇರಣೆಯನ್ನು ಒದಗಿಸಿದನು. ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ತೋರ್ಪಡಿಸಲ್ಪಟ್ಟ ಯೇಸುವಿನ ಕೋಮಲವಾದ ಕಾಳಜಿಯು ಬಂಡಾಯಗಾರರಾದ ಮಾನವರ ಹೃದಯಗಳನ್ನು ಸ್ಪರ್ಶಿಸಲಿಲ್ಲವೆಂದರೆ, ಬಹುಶಃ ಇನ್ನಾವದೂ ಅವರನ್ನು ದೇವರ ಸ್ನೇಹಿತರಾಗುವಂತೆ ಮಾಡಲಾರದು. ಇದಕ್ಕಿಂತ ಕಡಿಮೆಯಾದ ಪ್ರೇರಕಶಕ್ತಿಯೊಂದಿಗೆ, ವಿಧೇಯತೆಯುಳ್ಳ ಅಬ್ರಹಾಮನು ದೇವರ ಸ್ನೇಹಿತನೆಂದು ಕರೆಯಲ್ಪಟ್ಟನು ಯಾಕೆಂದರೆ ಆತನು ತನ್ನ ಮಗನಾದ ಇಸಾಕನನ್ನು ಯಜ್ಞವಾಗಿ ಅರ್ಪಿಸುವದಕ್ಕೆ

ಮನಸ್ಸುಳ್ಳವನಾಗಿದ್ದನು (ಯಾಕೋಬ 2:22, 23).

ಒಬ್ಬ ಆತ್ಮೀ ಜೀವಿಯಾಗಿ, ಯೇಸುವು ಪಾಪಕ್ಕಾಗಿ ಒಂದು ಯಜ್ಞವಾಗುವದಕ್ಕೆ ಸಾಧ್ಯವಾಗಲಿಲ್ಲ. ಮನುಷ್ಯನು ದೇಹವನ್ನು ಮಾತ್ರವೇ ಕೊಲ್ಲಬಲ್ಲನು (ನೋಡಿರಿ ಮತ್ತಾಯ 10:28). ಯೇಸುವು ನಮ್ಮ ಪಾಪಗಳಿಗೋಸ್ಕರ ಮರಣಿಸುವದಕ್ಕೆ ಸಾಧ್ಯವಾಗುವಂತೆ ಮಾನವ ದೇಹವನ್ನು ಧರಿಸಿಕೊಳ್ಳಬೇಕಾಯಿತು (ಇಬ್ರಿಯ 10:5). ಪಾಪಗಳನ್ನು ನಿವಾರಿಸುವದಕ್ಕೆ ಅಶಕ್ತವಾಗಿದ್ದ ಪ್ರಾಣಿ ಯಜ್ಞವು, ಕೇವಲ ಒಂದು ಛಾಯೆ ಮಾತ್ರವಾಗಿದ್ದು ಯೇಸುವಿನ ಮರಣಕ್ಕೆ ಮುಂಗುರುತಾಗಿತ್ತು (ಇಬ್ರಿಯ 10:1-4). ಆತನ ದೇಹದ ಮರಣದ ಮೂಲಕ, ಯೇಸುವು ದೇವರ ಸನ್ನಿಧಿಯೊಳಗೆ ಪ್ರವೇಶಿಸುವದಕ್ಕೆ ಮಾರ್ಗವನ್ನು ತೆರೆದನು (ಇಬ್ರಿಯ 10:19, 20).

"ಸ್ಥೂಲ ದೇಹ" (τὸ σῶμα τῆς σαρκὸς, *to sōma tēs sarkos*, "ಮಾಂಸದ ದೇಹ") ಎಂಬ ಪದಗಳು ಯೇಸು ಮಾಂಸಧಾರಿಯಾಗಿ ಬಂದನು ಎಂಬುದನ್ನು ಅಲ್ಲಗಳೆಯುವ ಕ್ರಿಸ್ತವಿರೋಧಿಗಳ ಸಿದ್ಧಾಂತಕ್ಕೆ ಉತ್ತರವಾಗಿರುತ್ತದೆ (2 ಯೋಹಾನ 7). ಯೇಸುವು ಎಂದಿಗೂ ಒಂದು ಮಾನವ ದೇಹದಲ್ಲಿ ಇಲ್ಲದ ನಿರ್ಮಲ ಆತ್ಮನಾಗಿದ್ದನು ಎಂದು ಗ್ನಾಸ್ಟಿಕ್.ವಾದಿಗಳು ವಾದಿಸುತ್ತಿದ್ದರು. ಭೌತವಸ್ತುವು ದೇವರ ಸ್ವಭಾವಕ್ಕೆ ಎಷ್ಟೊಂದು ವಿರುದ್ಧವಾದದ್ದೆಂದರೆ ಆತನು ಮಾನವ ದೇಹದಲ್ಲಿ ವಾಸವಾಗುವ ಸಾಧ್ಯತೆಯೇ ಇರಲಿಲ್ಲ. ಗ್ನಾಸ್ಟಿಕ್ ಸುಳ್ಳು ಬೋಧಕರ ಬೋಧನೆಯನ್ನು ಖಂಡಿಸುವಂತೆ ಪವಿತ್ರಾತ್ಮನು ಪೌಲನ ಮೂಲಕ ಕ್ರೈಸ್ತರನ್ನು ಸಿದ್ಧಗೊಳಿಸುತ್ತಿದ್ದಿರಬಹುದಾಗಿದೆ (1 ತಿಮೊಥೆ 4:1). ಅಪೊಸ್ತಲನು 2:11 ರಲ್ಲಿ ದೇಹದ ಕುರಿತು ಇನ್ನಷ್ಟನ್ನು ಹೇಳುವದಕ್ಕಿದ್ದನು.

ಯೇಸುವು ತನ್ನ ತಂದೆಯ ಸಂಗಡ ಸಂಧಾನಪಡಿಸಿಕೊಂಡ ದಾರಿತಪ್ಪಿದ ಮಗನೊಬ್ಬನ ಸಾಮ್ಯವನ್ನು ಹೇಳಿದನು. ಆತನು ತನ್ನ ತಂದೆಯ ಮನೆಯನ್ನು ತೊರೆದು ಹೋದನು ಮತ್ತು ಇಷ್ಟಬಂದ ಹಾಗೆ ಜೀವನ ನಡಿಸುತ್ತಾ ತನ್ನ ಪಾಲಿನ ಸ್ವತ್ತನ್ನೆಲ್ಲಾ (ತನ್ನ ತಂದೆಯ ಉಳಿತಾಯದಲ್ಲಿ ಅರ್ಧದಷ್ಟನ್ನು) ದುಂದುವೆಚ್ಚ ಮಾಡುವ ಮೂಲಕ ಪರಲೋಕದ ವಿರುದ್ಧವಾಗಿಯೂ ತನ್ನ ತಂದೆಯ ವಿರುದ್ಧವಾಗಿಯೂ ಪಾಪ ಮಾಡಿದನು. ಹೀಗೆ ಮಾಡುವದರಲ್ಲಿ, ಆತನು ತನ್ನನ್ನು ತಂದೆಗೆ ವಿರುದ್ಧ ತಪ್ಪು ಮಾಡಿ ಆತನಿಂದ ಬೇರ್ಪಡಿಸಿಕೊಂಡನು. ಹಾಗಿದ್ದರೂ, ತಂದೆಯು ಆತನನ್ನು ಪುನಃ ಸೇರಿಸಿಕೊಳ್ಳಲು ಮನಸ್ಸುಳ್ಳವನಾಗಿದ್ದನು. ತಂದೆಯು ಮಗನ ಬಳಿಗೆ ಹೋಗಲಿಲ್ಲ; ಬದಲಾಗಿ, ಮಗನೇ ತಂದೆಯ ಬಳಿಗೆ ಹಿಂದಿರುಗಿ ಬರಬೇಕಾಗಿತ್ತು (ಲೂಕ 15:11-24). ತಂದೆ ಮತ್ತು ಮಗನ ನಡುವೆ ಸಂಧಾನವು ತಂದೆಯ ಮನೆಯಲ್ಲಿಯೇ ಸಂಭವಿಸಿತು.

ಅದೇ ರೀತಿಯಲ್ಲಿಯೇ, ಪಾಪದ ನಿಮಿತ್ತ ಮಾನವರು ದೇವರಿಂದ ಬೇರ್ಪಟ್ಟವರಾಗಿದ್ದಾರೆ. ಯೇಸುವು ಲೋಕದ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಳ್ಳುವ ಮೂಲಕ ತಂದೆಯೊಂದಿಗೆ ಸಂಧಾನಗೊಳ್ಳುವದನ್ನು ಸಾಧ್ಯಗೊಳಿಸಿರುತ್ತಾನೆ (1 ಪೇತ್ರ 2:24). ಯೇಸು ದೇಹದಲ್ಲಿ ಹೊಂದಿದ ಮರಣದ ಮೂಲಕ, ದೇವರು ಸಂಧಾನವನ್ನು ಸಾಧ್ಯಗೊಳಿಸಿದನು; ಆದರೆ ಮಾನವರು ಸಂಧಾನಗೊಳ್ಳಬೇಕೆಂದರೆ ದೇವರನ್ನು ಕ್ರಿಸ್ತನಲ್ಲಿ ಸಂಧಿಸತಕ್ಕದ್ದು.

ಪೌಲನು ಕೊರಿಂಥದವರಿಗೆ ಹೀಗೆ ಬರೆದನು, "ದೇವರು ಮನುಷ್ಯರ ಅಪರಾಧಗಳನ್ನು

ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದನೆಂಬದೇ. ಅದನ್ನು ಸಾರುವ ಸೇವೆಗೆ ನಮ್ಮನ್ನು ನೇಮಿಸಿದ್ದಾನೆ" (2 ಕೊರಿಂಥ 5:19). ಆತನು ದೇವರೊಂದಿಗೆ ಸಂಧಾನಪಡಿಸಿಕೊಳ್ಳುವಂತೆ ಆ ಸಹೋದರರಿಗೆ ಬುದ್ಧಿವಾದ ಹೇಳುತ್ತಾನೆ (ವ. 20). ದೇವರು ಪಾಪಗಳನ್ನು ಕ್ಷಮಿಸುವದಕ್ಕಾಗಿ ಕ್ರಿಸ್ತನಲ್ಲಿ ಕಾಯುತ್ತಿದ್ದಾನೆ. ದೇವರ ಸಂಗಡ ಸಂಧಾನವು ಕ್ರಿಸ್ತನಲ್ಲಿ ಮಾತ್ರವೇ ಸಿಕ್ಕುತ್ತದೆ; ಅದು ಕ್ರಿಸ್ತನ ಹೊರಗೆ ಇರುವದೆಂದು ಎಂದಿಗೂ ಹೇಳಲ್ಪಟ್ಟಿಲ್ಲ. ನಮ್ಮ ಸಂಧಾನದ ವಿಷಯವಾಗಿ ಯೇಸು ಈಗಾಗಲೇ ದೇವರ ಭಾಗವನ್ನು ಪೂರ್ತಿಗೊಳಿಸಿರುತ್ತಾನೆ. ಜನರು ದೇವರ ಸಂಗಡ ಸಂಧಾನಪಡಿಸಲ್ಪಡುವ ಹಾಗೆ ಕ್ರಿಸ್ತನನ್ನು ಸೇರಿಕೊಳ್ಳುವದಕ್ಕೆ ಕಾರ್ಯಪ್ರವೃತ್ತರಾಗಬೇಕು. ಇಲ್ಲಿಯೇ ಮಾನವನು ಮತ್ತು ದೇವರು ಸಾಮರಸ್ಯ ಮತ್ತು ಸ್ನೇಹದಲ್ಲಿ ಸಂಧಿಸಬಹುದಾಗಿದೆ. ಕ್ರಿಸ್ತನಲ್ಲಿ ಸೇರಿಕೊಳ್ಳುವಿಕೆಯು ದೀಕ್ಷಾಸ್ನಾನದ ಮೂಲಕ ಸಂಭವಿಸುತ್ತದೆ (ರೋಮಾ 6:3; ಗಲಾತ್ಯ 3:26, 27).

## "ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ"

ಪೌಲನು ಯೇಸುವಿನ ಮರಣದ ಉದ್ದೇಶವನ್ನು ತಿಳಿಸುತ್ತಾನೆ: **ಮತ್ತು ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ.** ನಮ್ಮ ಪಾಪಗಳನ್ನೆಲ್ಲಾ ನಿವಾರಿಸುವದಕ್ಕಾಗಿ ತನ್ನ ದೇಹವನ್ನು ಯಜ್ಞವಾಗಿ ಅರ್ಪಿಸುವ ಮೂಲಕ, ಯೇಸುವು ಕೊಲೊಸ್ಸೆಯವರಿಗೆ ಪರಿಶುದ್ಧರೂ, ನಿರ್ದೋಷಿಗಳೂ ನಿರಪರಾಧಿಗಳೂ ಆಗಿರುವದಕ್ಕೆ ಸಾಧ್ಯಗೊಳಿಸಿದನು. ಆತನು ಅವರನ್ನು ತನ್ನ ಮುಂದೆ ಪಾಪದ ಕಳಂಕವಿಲ್ಲದವರನ್ನಾಗಿ ನಿಲ್ಲಿಸಬೇಕೆಂಬುದಕ್ಕಾಗಿ ಅವರನ್ನು ಸಂಧಾನಪಡಿಸಿದನು. ಪೌಲನು ಯೇಸುವಿನ ಮುಂದೆ ನಿಲ್ಲಿಸಲ್ಪಡಲಿರುವವರ ಪರಿಶುದ್ಧಗೊಂಡ ಸ್ಥಿತಿಯನ್ನು ಕುರಿತು ಒತ್ತಿ ಹೇಳುವದಕ್ಕೆ ಮೂರು ಗುಣವಾಚಕಗಳನ್ನು ಬಳಸಿದನು:

1. "ಪರಿಶುದ್ಧರು" (ἅγιοι, *hagioi*) ಎಂಬುದು ಪವಿತ್ರತೆಯ ಸಕಾರಾತ್ಮಕ ಸ್ಥಿತಿಯಾಗಿರುತ್ತದೆ. ಈ ಗುಣವು ಕೊಲೊಸ್ಸೆಯವರನ್ನು ಲೋಕದ ಕೆಟ್ಟ ಜನರಿಂದ ಪ್ರತ್ಯೇಕಗೊಳಿಸಿತ್ತು. ಅದೇ ಪದವು 1:2ರಲ್ಲಿ "ದೇವಜನರು" ಎಂದು ಅನುವಾದಿಸಲ್ಪಟ್ಟಿದೆ.
2. "ನಿರ್ದೋಷಿಗಳು" (ἄμωμοι, *amōmoi*) ಎಂದರೆ ಕೊಲೊಸ್ಸೆಯವರು ನಿಷ್ಕಳಂಕರಾಗಿ, ಅಪರಾಧ ಮುಕ್ತರಾಗಿ, ದೋಷವಿಲ್ಲದವರಾಗಿ ಯೇಸುವಿನ ಮುಂದೆ ನಿಲ್ಲಿಸಲ್ಪಡುವರು ಎಂದಾಗಿರುತ್ತದೆ. ಅವರಲ್ಲಿ ಯಾವ ತಪ್ಪೂ ಸಿಕ್ಕದ ಹಾಗೆ ಯೇಸುವಿನ ರಕ್ತದಿಂದ ಪವಿತ್ರಗೊಳಿಸಲ್ಪಟ್ಟಿದ್ದರು. *Amōmoi* ಎಂಬ ಪದವು ಸಭೆಯು ಯೇಸುವಿನ ರಕ್ತದಿಂದ ತೊಳೆಯಲ್ಪಟ್ಟು ಶುದ್ಧಮಾಡಲ್ಪಟ್ಟಿರುವದನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ (ಎಫೆಸ 5:26, 27; ನೋಡಿರಿ ಎಫೆಸ 1:4; ಯೂದನು 24; ಪ್ರಕಟನೆ 1:5). ಅಲ್ಲದೆ, ಅದು ಇಬ್ರಿಯ

9:14ರಲ್ಲಿ ಮತ್ತು 1 ಪೇತ್ರ 1:19ರಲ್ಲಿ ಯೇಸುವನ್ನು ಸೂಚಿಸುತ್ತದೆ, ಅಲ್ಲಿ ಆತನು ನಿಷ್ಕಳಂಕವಾದ ಯಜ್ಞದ ಕುರಿಗೆ ಹೋಲಿಸಲ್ಪಟ್ಟಿದ್ದಾನೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಬೇರೆ ಎಲ್ಲಿಯೂ ಕಾಣಿಸಿಕೊಳ್ಳುವದಿಲ್ಲ.

3. "ನಿರಪರಾಧಿಗಳು" (ἀνέγκλητοι, *anegklētoi*) ಎಂಬುದರ ಅರ್ಥವು ಅವರ ವಿರುದ್ಧವಾಗಿ ಯಾವ ಆರೋಪಗಳನ್ನು ಮಾಡುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಯೇಸು ಅವರ ಪಾಪಗಳ ಕಲೆಯನ್ನು ನಿವಾರಿಸಿ, ಅವರನ್ನು ತನ್ನ ರಕ್ತದಿಂದ ಸಂಧಾನಪಡಿಸಿದ್ದನು. ಹೊಸ ಒಡಂಬಡಿಕೆಯಲ್ಲಿ ಪೌಲನು ಮಾತ್ರವೇ ಈ ಪದವನ್ನು ಬಳಸಿದನು. ಆತನು ಕೊಲೊಸ್ಸೆಯವರಿಗೆ ಕರ್ತನ ದಿನದಲ್ಲಿ ಯೇಸುವು ಅವರನ್ನು ದೋಷವಿಲ್ಲದವರೆಂದು ದೃಢೀಕರಿಸುವನೆಂದು ಭರವಸೆ ನೀಡುತ್ತಾನೆ (1 ಕೊರಿಂಥ 1:8). ಹಿರಿಯರಾಗಿ ಅಥವಾ ಸಭಾಸೇವಕರಾಗಿ ಸೇವೆ ಮಾಡುವದಕ್ಕೆ ಆರಿಸಿಕೊಳ್ಳಲ್ಪಟ್ಟವರು ನಿಂದಾರಹಿತರಾಗಿರಬೇಕಾಗಿರುತ್ತದೆ (1 ತಿಮೊಥೆ 3:10; ತೀತನಿಗೆ 1:6, 7).

ಈ ಮೂರು ಪದಗಳು ಯೇಸುವಿನ ರಕ್ತದ ನಿಮಿತ್ತವಾಗಿ ಅನುಗ್ರಹಿಸಲ್ಪಟ್ಟಿರುವ ಸಂಧಾನದ ಕಾರಣದಿಂದ ದೇವರ ಮುಂದೆ ಪಾಪರಹಿತತೆಯಿಂದಿರುವ ಒಂದೇ ಆಲೋಚನೆಯನ್ನು ವ್ಯಕ್ತಪಡಿಸುತ್ತವೆ. ಯೇಸುವು ಶುದ್ಧಮಾಡಿರುವ ಮತ್ತು ನಿಷ್ಕಳಂಕಗೊಳಿಸಿರುವ ಸಭೆಯು ಆತನು ತನ್ನ ಮುಂದೆ ನಿಲ್ಲಿಸಿಕೊಳ್ಳಲಿರುವವರನ್ನು ಒಳಗೊಂಡಿರುತ್ತದೆ ಎಂದು ಪೌಲನು ಹೇಳುತ್ತಾನೆ (ಎಫೆಸ 5:25-27).

ಪಾಪಕೃತ್ಯಗಳ ಕಾರಣದಿಂದಾಗಿ, ಒಬ್ಬನೂ ನೀತಿವಂತನಾಗಿರುವದಿಲ್ಲ (ರೋಮಾ 3:9, 10); ಯಾವನೂ ದೇವರ ಮುಂದೆ ವೈಯಕ್ತಿಕ ಪರಿಶುದ್ಧತೆಯನ್ನು ಹೊಂದಿದವನಲ್ಲ, ನಿರ್ದೋಷಿಯಾಗಿರುವದಿಲ್ಲ, ಅಥವಾ ನಿರಪರಾಧಿಯಾಗಿರುವದಿಲ್ಲ. ಇವುಗಳು ಯೇಸುವಿನ ಕಾರ್ಯದ ಮೂಲಕವಷ್ಟೇ ಬಂದವು. ಪೌಲನು ಇದೇ ಆಲೋಚನೆಯನ್ನು ಎಫೆಸದವರಿಗೆ ಪತ್ರಿಕೆಯಲ್ಲಿ ವ್ಯಕ್ತಪಡಿಸಿದನು (1:4 ಮತ್ತು 5:27). ಯೇಸುವಿನ ರಕ್ತದಿಂದ ಶುದ್ಧಗೊಳಿಸಲ್ಪಡುವದೇ ಜನರನ್ನು ದೇವರ ಸಂಗಡ ಸಮಾಧಾನಗೊಳಿಸುತ್ತದೆ; ಶುದ್ಧಗೊಳಿಸಲ್ಪಟ್ಟವರು ಇನ್ನು ಮೇಲೆ ಅಪರಾಧವಿರುವವರಲ್ಲ. ಸಕಾರಾತ್ಮಕ ಮಾತಿನಲ್ಲಿ ಹೇಳುವದಾದರೆ, ನಂಬಿಕೆಯಿರುವವರಿಗಾಗಿ ಅವರನ್ನು ತನ್ನ ಮುಂದೆ "ಪರಿಶುದ್ಧರನ್ನಾಗಿ" ನಿಲ್ಲಿಸಿಕೊಳ್ಳುವದನ್ನು ಸಾಧ್ಯಗೊಳಿಸಿದ್ದಾನೆ; ನಕಾರಾತ್ಮಕ ಮಾತಿನಲ್ಲಿ ಹೇಳುವದಾದರೆ, ಆತನು ಅವರನ್ನು "ದೋಷರಹಿತ"ರನ್ನಾಗಿ ಮತ್ತು "ನಿರಪರಾಧಿ"ಗಳನ್ನಾಗಿ ಮಾಡಬಲ್ಲನು. ಪಾಪಿಗಳು ಸ್ವಲ್ಪವೂ ಅಪರಾಧವಿಲ್ಲದವರಾಗುವಂತೆ ಶುದ್ಧಗೊಳಿಸಲ್ಪಡಬಹುದಾಗಿದೆ. ಇದು ಅವಶ್ಯಕವಾಗಿರುತ್ತದೆ ಯಾಕೆಂದರೆ ಪಾಪವಿರುವ (ಯೋಹಾನ 8:21) ಮತ್ತು ಅಶುದ್ಧನಾಗಿರುವ ಯಾವನೂ ಪರಲೋಕವನ್ನು ಪ್ರವೇಶಿಸಲಾರನು (ಪ್ರಕಟನೆ 21:27).

ಧರ್ಮಶಾಸ್ತ್ರವು (ಮೋಶೆಯಿಂದ ಪ್ರತಿನಿಧಿಸಲ್ಪಟ್ಟಂಥ; ಯೋಹಾನ 5:45) ತನ್ನ ಆಜ್ಞೆಯನ್ನು ಮೀರಿದವರನ್ನು ದೋಷಿಗಳೆಂದು ಆರೋಪಿಸಿ ಅವರನ್ನು ಶಾಪಕ್ಕೆ ಗುರಿಯಾಗಿಸಿತು (ಗಲಾತ್ಯ 3:10). ಯೇಸುವನ್ನು ತಿರಸ್ಕರಿಸುವವರಿಗೆ ಆತನ ವಾಕ್ಯವೇ ನ್ಯಾಯತೀರಿಸುವದು (ಯೋಹಾನ 12:48). ಯೇಸುವಿನ ರಕ್ತದಿಂದ ಶುದ್ಧಗೊಳಿಸಲ್ಪಟ್ಟವರ ವಿರುದ್ಧವಾಗಿ ಯಾವದೂ ಇರದು ಮತ್ತು ಯಾರೊಬ್ಬರೂ ಅವರನ್ನು ಅಪರಾಧಿಗಳೆಂದು

ಆರೋಪಿಸುವದಕ್ಕೆ ಆಗುವದಿಲ್ಲ. ದೇವರು ಅವರನ್ನು ದೋಷಿಗಳೆಂದು ಆರೋಪಿಸುವದಿಲ್ಲ, ಯಾಕೆಂದರೆ ಅವರು ಯೇಸುವಿನ ರಕ್ತದಿಂದ ಆತನೊಂದಿಗೆ ಸಂಧಾನಪಡಿಸಲ್ಪಟ್ಟಿರುತ್ತಾರೆ. ಯೇಸು ಅವರ ಮೇಲೆ ತಪ್ಪು ಹೊರಿಸುವದಿಲ್ಲ ಯಾಕೆಂದರೆ ಅವರ ಪಾಪಗಳನ್ನು ಆತನೇ ಹೊತ್ತುಕೊಂಡನು. ಸೈತಾನನು ಸೋಲಿಸಲ್ಪಟ್ಟವನಾಗಿದ್ದಾನಾದ್ದರಿಂದ ಆತನು ಅವರ ಮೇಲೆ ತಪ್ಪು ಹೊರಿಸುವದಕ್ಕೆ ಆಗುವದಿಲ್ಲ (ಪ್ರಕಟನೆ 12:10). ಅವರ ಮನಸ್ಸಾಕ್ಷಿಯು ಸಹ ಅವರ ಮೇಲೆ ತಪ್ಪು ಹೊರಿಸುವದಿಲ್ಲ, ಯಾಕೆಂದರೆ ಅವರು ದೀಕ್ಷಾಸ್ನಾನದ ಮೂಲಕ (1 ಪೇತ್ರ 3:21) ಶುದ್ಧಗೊಳಿಸಲ್ಪಟ್ಟಿದ್ದಾರೆ (ಇಬ್ರಿಯ 9:14; 10:22). ಅವರಿಗೆ ವಿರುದ್ಧವಾಗಿ ತಪ್ಪು ಹೊರಿಸುವವರು ಯಾರೂ ಇಲ್ಲದಿರುವಾಗ, ಅವರು ನಿರಪರಾಧಿಗಳಾಗಿ ನಿಲ್ಲುವರು.

ಸತ್ಯಕ್ಕೆ ವಿಧೇಯರಾಗುವ ಮೂಲಕದ ಶುದ್ಧೀಕರಣವು (1 ಪೇತ್ರ 1:22) ದೀಕ್ಷಾಸ್ನಾನದ ವೇಳೆ ಒಂದೇ ಸಾರಿ ಸಂಭವಿಸುವ ಘಟನೆಯಾಗಿ ಆರಂಭಗೊಳ್ಳುತ್ತದೆ, ಆ ವೇಳೆಯಲ್ಲಿ ಎಲ್ಲಾ ಪಾಪಗಳು ನಿವಾರಿಸಲ್ಪಡುತ್ತವೆ (ಅಪೊಸ್ತಲರ ಕೃತ್ಯಗಳು 2:38; 22:16). ಈ ಶುದ್ಧಗೊಳಿಸುವಿಕೆಯು ಬೆಳಕಿನಲ್ಲಿ ನಡೆಯುವವರಿಗೆ ಮತ್ತು ದೇವರ ಮುಂದೆ ತಮ್ಮ ಪಾಪಗಳ ಅರಿಕೆ ಮಾಡುವವರಿಗೆ ನಿರಂತರವಾಗಿ ಸಾಗುತ್ತದೆ (1 ಯೋಹಾನ 1:7-9). ನಂಬಿಕೆಯಲ್ಲಿ ಮುಂದುವರೆಯುವವರು ನಿರಂತರವಾದ ಶುದ್ಧೀಕರಣ ಹೊಂದಿರುವರಾದ್ದರಿಂದ, ಅವರು ನ್ಯಾಯತೀರ್ಪಿನ ದಿನದಂದು ಯೇಸುವಿನ ಮುಂದೆ ನಿಲ್ಲಿಸಲ್ಪಟ್ಟಾಗ ನಿರ್ದೋಷಿಗಳಾಗಿರುವರು.

ಯೇಸುವು ಶಿಲುಬೆಯ ಮೇಲೆ ಅರ್ಪಿಸಲ್ಪಟ್ಟ ಒಂದು ಯಜ್ಞದ ಮೂಲಕ ಈ ಕ್ಷಮಾಪಣೆಯನ್ನು ಒದಗಿಸಿರುತ್ತಾನೆ (ಇಬ್ರಿಯ 7:27; 9:26-28; 10:10-12, 14). ಆತನು ಪಾಪಕ್ಕೋಸ್ಕರ ತನ್ನನ್ನು ಪುನಃ ಪುನಃ ಅರ್ಪಿಸಿಕೊಳ್ಳಬೇಕಾಗಿರುವದಿಲ್ಲ. ಯೇಸು ಪಾಪಕ್ಕೋಸ್ಕರ ತನ್ನ ಒಂದೇ ಯಜ್ಞವನ್ನು ಅರ್ಪಿಸಿ ಮುಗಿಸಿದ ಬಳಿಕ, ಆತನು ಕುಳಿತುಕೊಂಡನು. ಆತನು ಕುಳಿತುಕೊಳ್ಳುವಂತಾಗಲು, ಎದ್ದು ಪುನಃ ತನ್ನನ್ನು ಯಜ್ಞವಾಗಿ ಅರ್ಪಿಸಿಕೊಳ್ಳುವ ಅಗತ್ಯವಿಲ್ಲದಂತಾಗಲು, ಆತನು ತನ್ನ ಕೆಲಸವನ್ನು ಪೂರ್ತಿಗೊಳಿಸಿದನು.

ಯೇಸುವು ಸಿಂಹಾಸನದ ಮೇಲೆ ನ್ಯಾಯಾಧಿಪತಿಯಾಗಿರುವನು (ಮತ್ತಾಯ 25:31, 32; ಅಪೊಸ್ತಲರ ಕೃತ್ಯಗಳು 17:31; 2 ಕೊರಿಂಥ 5:10; 2 ತಿಮೊಥೆ 4:1). ಆತನ ರಕ್ತದಿಂದ ಶುದ್ಧಗೊಳಿಸಲ್ಪಟ್ಟವರ ವಿರುದ್ಧವಾಗಿ ಯಾವದೇ ತಪ್ಪು ಮಾಡಿದ ಆರೋಪವು ಹೊರಿಸಲ್ಪಡುವದಿಲ್ಲ. ಅವರು ಆತನ ದೃಷ್ಟಿಯಲ್ಲಿ ಪವಿತ್ರರೆಂದು ಪರಿಗಣಿಸಲ್ಪಡುವ ಕಾರಣದಿಂದ, ಅವರು ಯೇಸುವಿನ ಮುಂದೆ ನಿಷ್ಕಳಂಕರಾಗಿ ನಿಲ್ಲಿಸಲ್ಪಡುವರು.

## ಅಗತ್ಯವಿರುವ ನಂಬಿಗಸ್ತಿಕೆ (1:23, 24)

**[23]ನೀವು ಕೇಳಿದಂಥ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವದು.**

**[24]ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು . . .**

**“ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ” (1:23)**

ನಾವು ಈ ಜೀವಿತಕಾಲದ ವೇಳೆಯಲ್ಲಿ ದೇವರ ಮುಂದೆ “ಪರಿಶುದ್ಧರಾಗಿಯೂ ನಿರ್ದೋಷಿಗಳಾಗಿಯೂ ನಿರಪರಾಧಿಗಳಾಗಿಯೂ” ನಿಲ್ಲಿಸಲ್ಪಡುವದಕ್ಕೆ ಸಾಧ್ಯವಿಲ್ಲ. ಆ ಸಂಧರ್ಭವು ನಂಬಿಗಸ್ತರಾಗಿ ನೆಲೆಗೊಳ್ಳುವವರಿಗಾಗಿ ಮಾತ್ರವೇ ಇರುವದಾಗಿದೆ: **ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ.** (“ನಂಬಿಕೆಯಲ್ಲಿ” ಎಂಬ ಪದವು ಗ್ರೀಕ್.ನ τῇ πίστει [*tē pistei*] ಎರಡು ಪದಗಳನ್ನೊಳಗೊಂಡಿದೆ, “ನಂಬಿಕೆ” ಎಂಬುದು ಚತುರ್ಥೀ ವಿಭಕ್ತಿಯದಲ್ಲಿರುತ್ತದೆ. “ನೆಲೆಗೊಂಡಿರು”ವ ಲಕ್ಷ್ಯವನ್ನು ತಿಳಿಯಪಡಿಸಬೇಕೆಂದರೆ “ಯಲ್ಲಿ” ಎಂಬದನ್ನು ಸೇರ್ಪಡೆಗೊಳಿಸುವದು ಅವಶ್ಯಕವಾಗಿರುತ್ತದೆ.)

ದೇವರ ಮುಂದೆ ನಿರ್ದೋಷಿಗಳಾಗಿ ನಿಲ್ಲಿಸಲ್ಪಡುವದು ಶರತ್ತಿನಿಂದ ಕೂಡಿರುತ್ತದೆ. ಇದು ಗ್ರೀಕ್.ನ εἴ (*ei*, “ದಾದರೆ”) ಎಂಬ ಪದದಿಂದ ವ್ಯಕ್ತಪಡಿಸಲ್ಪಟ್ಟಿದೆ. ದೇವರ ಮುಂದೆ ನಿರ್ದೋಷಿಗಳಾಗಿ ನಿಲ್ಲಿಸಲ್ಪಡುವವರು ಯಾರೆಂದರೆ ನಂಬಿಕೆಯಲ್ಲಿ ನೆಲೆಗೊಳ್ಳುವವರೇ. ಒಂದು ಬಾರಿಯ ನಂಬಿಕೆಯು ಸಾಕಾಗುವದಿಲ್ಲ. ನಾವು ನಂಬಿಕೆಯಲ್ಲಿ ನೆಲೆಗೊಳ್ಳುವದಾದರೆ ಮಾತ್ರವೇ ಯೇಸುವಿನಿಂದ ಪವಿತ್ರಗೊಳಿಸಲ್ಪಟ್ಟವರಾಗಿ ನಿಲ್ಲಿಸಲ್ಪಡುವೆವು. “ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ . . .” ಅವರಿಗೆ ನಿತ್ಯಜೀವವು ಕೊಡಲ್ಪಡುತ್ತದೆ (ರೋಮಾ 2:7). ಆತನ ಮುಂದೆ ಪಾಪದ ದೋಷವಿಲ್ಲದವರಾಗಿ ನಿಲ್ಲಿಸಲ್ಪಡುವವರು ಯಾರೆಂದರೆ ನಂಬಿಕೆಯ ಮೂಲಕ ಯೇಸುವನ್ನು ಹಿಂಬಾಲಿಸುವದಕ್ಕೆ ಆರಂಭಿಸಿ ಆ ನಂಬಿಕೆಯಲ್ಲಿ ನಿರಂತರವಾಗಿ ನೆಲೆಗೊಳ್ಳುವವರೇ ಆಗಿದ್ದಾರೆ.

> ವಾಚಕರು ತಪ್ಪು ಮಾಡುವದರಿಂದ ಹೊರತಾದವರೇನಲ್ಲ ಎಂಬುದು 23ನೇ ವಚನದಲ್ಲಿ ಜಾಗರೂಕವಾದ ಎಚ್ಚರಿಕೆಯಲ್ಲಿ ಸೂಚಿತವಾಗಿರುತ್ತದೆ: ಅವರಿಗಾಗಿ ರಕ್ಷಣೆಯ ಪ್ರಾಥಮಿಕ ಶರತ್ತು ಏನೆಂದರೆ ಅವರು ನಂಬಿಕೆಯಲ್ಲಿ ದೃಢವಾಗಿ ನೆಲೆಗೊಂಡಿರಬೇಕು ಮತ್ತು ಸುವಾರ್ತೆಯ ಮೂಲಕ ತಿಳಿದುಕೊಂಡ ನಿರೀಕ್ಷೆಗೆ ಸಂಪೂರ್ಣ ಸಮರ್ಪಣೆಯನ್ನು ಹೊಂದಿರಬೇಕು ಎಂಬದೆ (cf. 1:5) . . .[1]

ನ್ಯಾಯತೀರ್ಪಿನ ದಿನದಂದು, ವಿಮೋಚಿಸಲ್ಪಟ್ಟವರ ಪಾಪಗಳು ಪ್ರಸ್ತಾಪಿಸಲ್ಪಡುವದಿಲ್ಲ. ದೇವರು ಪಾಪಗಳನ್ನು ಕ್ಷಮಿಸಿದಾಗ, ಅವುಗಳು ಮರೆತು ಹೋಗಲ್ಪಡುತ್ತವೆ ಮತ್ತು ಇನ್ನೆಂದಿಗೂ ನೆನಪಿಸಿಕೊಳ್ಳಲ್ಪಡುವದಿಲ್ಲ (ಇಬ್ರಿಯ 8:12). ಯೇಸುವಿನ ಸಂಗಡ ನಿರಂತರವಾಗಿ ಬೆಳಕಿನಲ್ಲಿ ನಡೆಯುವದರ ಮತ್ತು ಪಾಪಗಳನ್ನು ಅರಿಕೆ ಮಾಡುವದರ ಸೊಗಸಾದ ಕಾರ್ಯವೇನೆಂದರೆ ಆತನ ರಕ್ತವು ಅವುಗಳನ್ನು ತೊಳೆದು ಶುದ್ಧ ಮಾಡುವದೇ (1 ಯೋಹಾನ 1:7-10).

“ದಾದರೆ” ಎಂದು ಬರೆಯುವ ಮೂಲಕ, ಪೌಲನ ತಾತ್ಪರ್ಯವೇನಾಗಿತ್ತೆಂದರೆ ನಂಬಿಕೆಯಲ್ಲಿ ನೆಲೆಗೊಂಡಿರದವರು ಪರಿಶುದ್ಧರಾಗಿಯೂ ನಿರ್ದೋಷಿಗಳಾಗಿಯೂ ನಿರಪರಾಧಿಗಳಾಗಿಯೂ ನಿಲ್ಲಿಸಲ್ಪಡುವದಿಲ್ಲ ಎಂಬದೆ. “ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ” ಎಂಬದರ ಅರ್ಥವು ನಂಬಿಕೆಯನ್ನು ತೊರೆಯುವಿಕೆಯ

ಸಾಧ್ಯತೆಯು ವಾಸ್ತವಿಕವಾದದ್ದು ಎಂಬದೆ. ಕ್ರಿಸ್ತನಲ್ಲಿನ ನಂಬಿಕೆಯ ಕಾರಣದಿಂದ ಆತನಲ್ಲಿ ನೆಲೆಗೊಂಡಿರುವವರೇ ದೇವರ ಮುಂದೆ ನಿಲ್ಲಿಸಲ್ಪಡುವರು ಮತ್ತು ಆತನಿಂದ ಅಂಗೀಕರಿಸಿಕೊಳ್ಳಲ್ಪಡುವರು.

ಅವರು ನಂಬಿಕೆಯಲ್ಲಿ ನೆಲೆಗೊಳ್ಳುವದಾದರೆ, ಕೊಲೊಸ್ಸೆಯವರು "ಅಸ್ತಿವಾರದ ಮೇಲೆ ನಿಂತು," "ಸ್ಥಿರವಾಗಿದ್ದು" ಮತ್ತು "ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ" ನಿಲ್ಲುವವರಾಗಿದ್ದರು. "ನಂಬಿಕೆ" ಕ್ರಿಸ್ತನ ಬೋಧನೆಯ ಮುಖ್ಯಭಾಗವಾಗಿರುತ್ತದೆ.[2] ನಮ್ಮ ಗುರಿಯು ಸಹ, ಪೌಲನು ವರ್ಣಿಸಿದ ಪ್ರಕಾರವಾಗಿ ನಂಬಿಕೆಯಲ್ಲಿ ನೆಲೆಗೊಂಡಿರುವದೇ ಆಗಿರತಕ್ಕದ್ದು.

"ಅಸ್ತಿವಾರದ ಮೇಲೆ ನಿಂತು" (τεθεμελιωμένοι, *tethemeliōmenoi*) ಎಂಬುದು ಗ್ರೀಕ್.ನಲ್ಲಿ ಒಂದು ಪರಿಪೂರ್ಣ ಕೃದಂತವಾಗಿದ್ದು ಕೊಲೊಸ್ಸೆಯವರು ಸ್ಥಾಪಿಸಲ್ಪಟ್ಟಿದ್ದರು ಮತ್ತು ಆ ಸ್ಥಿತಿಯಲ್ಲಿ ಮುಂದುವರೆಯಬೇಕು ಎಂಬದಾಗಿ ಸೂಚಿಸುದಾಗಿದೆ. ಇದು ಒಂದು ಕಟ್ಟಡಕ್ಕೆ ಅಡಿಪಾಯದ ವಸ್ತುವನ್ನು ಒದಗಿಸುವದು ಎಂಬ ಅರ್ಥವನ್ನು ಕೊಡುತ್ತದೆ, ಉದಾಹರಣೆಗೆ ಒಂದು ಮನೆಯ ಅಥವಾ ಭೂಮಿಯ ಅಸ್ತಿವಾರ (ಮತ್ತಾಯ 7:25; ಇಬ್ರಿಯ 1:10). ಒಂದು ಆತ್ಮೀಕ ಅರ್ಥದಲ್ಲಿ, ಒಬ್ಬನ ಆತ್ಮೀಕ ಜೀವನಕ್ಕೆ ಒಂದು ಭದ್ರವಾದ ನೆಲೆ ಎಂಬುದನ್ನು ಸೂಚಿಸುತ್ತದೆ (ಎಫೆಸ 3:17).

"ಸ್ಥಿರವಾಗಿದ್ದು" (ἑδραῖοι, *hedraioi*) ಎಂಬುದು ಅಚಲವಾಗಿ ನಿಂತಿರುವದು ಎಂಬ ಯೋಚನೆಯನ್ನು ವ್ಯಕ್ತಪಡಿಸುತ್ತದೆ. "ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು" ಎಂಬುದು ಬಹುಶಃ ಒಂದು ಗಟ್ಟಿಯಾದ ಅಸ್ತಿವಾರದ ಮೇಲೆ ನಿಲ್ಲಿಸಲ್ಪಟ್ಟಿರುವ ಉತ್ತಮವಾಗಿ ಕಟ್ಟಲ್ಪಟ್ಟ ಕಟ್ಟಡವೊಂದರ ಸ್ಥಿರತೆಗೆ ಸೂಚ್ಯಾರ್ಥವಾಗಿರಬಹುದಾಗಿದೆ. ಯೇಸುವಿನ ಬೋಧನೆಗಳಿಗೆ ವಿಧೇಯರಾಗುವವರು ಕದಲಿಸಲ್ಪಡದಂಥ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟವರಾಗಿದ್ದು ಅವರು ಸಂಕಷ್ಟದ ಕಾಲದಲ್ಲಿ ದೃಢವಾಗಿಯೂ ಭದ್ರವಾಗಿಯೂ ನೆಲೆಗೊಳ್ಳುವರು (ಮತ್ತಾಯ 7:24-27). ಆತನು ನಮ್ಮ ಆತ್ಮೀಕ ಬಂಡೆಯಾಗಿದ್ದಾನೆ (1 ಕೊರಿಂಥ 10:4). ಆತನ ಮೇಲೆಯೇ ಸಭೆಯು ಕಟ್ಟಲ್ಪಟ್ಟಿದೆ (ಮತ್ತಾಯ 16:18); ಇನ್ನಾವ ಅಸ್ತಿವಾರವೂ ಇರುವದಿಲ್ಲ (1 ಕೊರಿಂಥ 3:11).

"ತೊಲಗಿಹೋಗದೆ" ಎಂಬುದಕ್ಕೆ ಭಯಂಕರವಾದ ಗಾಳಿ ಮತ್ತು ಪ್ರಕ್ಷುಬ್ಧ ಅಲೆಗಳ ನಡುವೆಯೂ ಅಚಲವಾದ ಸ್ಥಾನದಲ್ಲಿ ನಿಂತಿರುವಂಥ ಲಂಗರು ಹಾಕಲ್ಪಟ್ಟ ಹಡಗಿನ ದೃಷ್ಟಾಂತವನ್ನು ಕೊಡಬಹುದಾಗಿದೆ. ಪೌಲನು ಎಫೆಸದವರಿಗೆ ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಕೊಂಡು ಹೋಗುವವರ ಹಾಗಿರಬಾರದು ಎಂದು ಬೋಧಿಸಿದನು (ಎಫೆಸ 4:14). 1:5ರಲ್ಲಿ ಕೊಲೊಸ್ಸೆಯವರು ಸುವಾರ್ತೆಯಿಂದ ಕಂಡುಕೊಂಡಿದ್ದ "ನಿರೀಕ್ಷೆ" (ಪದವಿ) ಯನ್ನು ಕುರಿತು ಆತನು ಉಲ್ಲೇಖಿಸಿದನು. ಅವರು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ ಆ ನಿರೀಕ್ಷೆಯ ಫಲವನ್ನು ಹೊಂದಿಕೊಳ್ಳುವರು. ಸುಳ್ಳು ಬೋಧಕರು ಅವರನ್ನು ಇತರ ಉಪದೇಶಗಳನ್ನು ಹಿಂಬಾಲಿಸುವಂತೆ ಮನವೊಲಿಸುವದಕ್ಕೆ ಪ್ರಯತ್ನಿಸಬಹುದು (2:8); ಆದರೆ ಕೊಲೊಸ್ಸೆಯವರು ದೇವರನ್ನು ಮೆಚ್ಚಿಸಬೇಕಾಗಿದ್ದರೆ, ಅವರು ಯೇಸುವಿನ ಬೋಧನೆಯ ಮುಖ್ಯಭಾಗವನ್ನು ಹಿಂಬಾಲಿಸತಕ್ಕದ್ದಾಗಿತ್ತು.

**“ನೀವು ಕೇಳಿದಂಥ . . . ಸಾರಲ್ಪಟ್ಟಂಥ . . . ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು” (1:23, 24)**

ಆ ಬೋಧನೆಯು **ನೀವು ಕೇಳಿದಂಥ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆ . . . ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು.** ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಇದೇ ಮೊದಲ ಬಾರಿಗೆ ಪೌಲನು “ನಾನು” (ಉತ್ತಮ ಪುರುಷ ಏಕವಚನ) ಎಂದು ಬಳಸುತ್ತಾನೆ, ಪತ್ರಿಕೆಯನ್ನು ಆತನೇ ಬರೆದನೆಂಬುದನ್ನು ಸೂಚಿಸುತ್ತದೆ.

ಕೊಲೊಸ್ಸೆಯವರು ಎಪಫ್ರನಿಂದ ಸುವಾರ್ತೆಯನ್ನು “ಕೇಳಿದ್ದರು” (ನೋಡಿರಿ 1:7). ಆತನು ಅವರಿಗೆ ಬೋಧಿಸಿದ್ದು ಎಲ್ಲೆಡೆಯಲ್ಲಿಯೂ ದೇವರ ಸಂದೇಶಕರು ಸಾರುತ್ತಿದ್ದ ಅದೇ ಸುವಾರ್ತೆಯನ್ನೇ ಆಗಿತ್ತು (ಮಾರ್ಕ 16:15). ಯೆಹೂದ್ಯರಾಗಲಿ ಮತ್ತು ಅನ್ಯಜನರಾಗಲಿ, ಸರ್ವರಿಗೂ ಕ್ರಿಸ್ತನ ಸಂದೇಶವು ಒಂದೇ ಆಗಿರುತ್ತದೆ (ಅಪೊಸ್ತಲರ ಕೃತ್ಯಗಳು 15:11; ರೋಮಾ 1:16; 2:6-11). ಬೇಡಿಕೆಗಳು, ನಿರ್ಬಂಧಗಳೂ, ಸ್ವಾತಂತ್ರ್ಯಗಳು, ವಾಗ್ದಾನಗಳು, ಮತ್ತು ಆಶೀರ್ವಾದಗಳು ಎಲ್ಲಾ ಕ್ರೈಸ್ತರಿಗೂ ಒಂದೇ ಆಗಿರುತ್ತವೆ.

ಸುವಾರ್ತೆಯ ಮಹಾ ಸಂದೇಶವು “ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ”ದ್ದಾಗಿರುತ್ತದೆ (ವ. 23). “ಸರ್ವ,” ಎಂಬುದು 1:6ರಲ್ಲಿರುವಂತೆಯೇ, ಲೇಖಕನಿಂದ ಸೂಚ್ಯಾರ್ಥವಾಗಿ ಹೇಳಲ್ಪಟ್ಟಿರುವ ಒಂದು ವರ್ಗದಲ್ಲಿನ ಸಮಸ್ತವು ಎಂದರ್ಥವಾಗಿರುತ್ತದೆ, ಹೊರತು ಸಾಧ್ಯವಾದ ಎಲ್ಲಾ ಸಂಗತಿ ಎಂದಾಗಿರುವದಿಲ್ಲ. ಸುವಾರ್ತೆಯು ಭೂಮಿಯ ಪ್ರತಿಯೊಂದು ಪ್ರಾಂತ್ಯಕ್ಕೂ ಸುವಾರ್ತೆಯು ಸಾರಲ್ಪಟ್ಟಿದೆ ಎಂಬರ್ಥದಲ್ಲಿ ಪೌಲನು ಹೇಳಲಿಲ್ಲ. ಲೂಕ 2:1-3ರಲ್ಲಿ ರೋಮನ್ ರಾಜಾಜ್ಞೆಯು ರಾಜ್ಯವೆಲ್ಲಾ ಖಾನೆಷುಮಾರಿ ಬರಸಿಕೊಳ್ಳತಕ್ಕದ್ದೆಂದು ಹೇಳುತ್ತದೆ, ಅದರ ಫಲಿತವಾಗಿ “ಎಲ್ಲರೂ” ಖಾನೆಷುಮಾರಿ ಬರಸಿಕೊಂಡರು. ರೋಮನ್ ಜಗತ್ತಿನಲ್ಲಿದ್ದವರು ಮಾತ್ರವೇ ಖಾನೆಷುಮಾರಿ ಬರಸಿಕೊಂಡರು, ಹೊರತು ಲೋಕದಲ್ಲೆಲ್ಲಾ ಇದ್ದ ಪ್ರತಿಯೊಬ್ಬರೂ ಅಲ್ಲ. ಎಲೀಯನ ಕಾಲದಲ್ಲಿ ಬರವು “ದೇಶದಲ್ಲೆಲ್ಲಾ” ಇತ್ತೆಂದು ಹೇಳಲಾಯಿತು (ಲೂಕ 4:25), ಅದರರ್ಥವು ಇಸ್ರಾಯೇಲಿನ ಇಡೀ ದೇಶದಲ್ಲೆಲ್ಲಾ ಎಂದಾಗಿರುತ್ತದೆ. “ಎಲ್ಲಾ” ಎಂಬುದು ಅನೇಕ ಸಾರಿ ವ್ಯಾಪ್ತಿಯಲ್ಲಿ ಮೀತಿಯುಳ್ಳದ್ದಾಗಿರುತ್ತದೆ. ಇಲ್ಲಿ “ಸರ್ವಸೃಷ್ಟಿಗೆ” ಎಂಬ ಬಳಕೆಯು ತಿಳಿಯಪಡಿಸುವದೇನೆಂದರೆ ಯೆಹೂದ್ಯರು ಉಪದೇಶಿಸಲ್ಪಟ್ಟಿದ್ದಕ್ಕಿಂತಲೂ ಅಧಿಕವಾಗಿ; ಅನ್ಯಜನರ ಜಗತ್ತು ಸುವಾರ್ತೆಯ ಆಮಂತ್ರಣದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿತ್ತು ಎಂಬದೆ.

ಪೌಲನು ತನ್ನನ್ನು ಕ್ರಿಸ್ತನ ಸುವಾರ್ತೆಗೆ “ಸೇವಕ” (διάκονος, *diakonos*) ಎಂದು ಕರೆದುಕೊಳ್ಳುತ್ತಾನೆ. ಆತನು ಎಪಫ್ರನನ್ನು ಸೂಚಿಸುವಾಗ 1:7ರಲ್ಲಿ ಅದೇ ಪದವನ್ನು ಬಳಸುತ್ತಾನೆ, ಅಲ್ಲಿ ಅದು “ದಾಸ” ಎಂದು ಅನುವಾದಿಸಲ್ಪಟ್ಟಿದೆ.

ಸುವಾರ್ತೆಯ ನಿಜ ಸೇವಕನು ಮತ್ತು ಕ್ರಿಸ್ತನ ದಾಸನಾಗಿ, ಪೌಲನು ತನ್ನ ಸುವಾರ್ತೆಯ ವಿಶ್ವವ್ಯಾಪಕತೆಯನ್ನು ಕೊಲೊಸ್ಸೆಯವರು ಗ್ರಹಿಸಿಕೊಳ್ಳಬೇಕೆಂದು ಬಯಸಿದನು. ಸುವಾರ್ತೆಯು ಎಲ್ಲೆಡೆಯೂ ಇರುವ ಪ್ರತಿಯೊನ್ನ ಮಾನವ ಜೀವಿಗಾಗಿ ಇರುತ್ತದೆ.

# ಅನ್ವಯಿಸುವಿಕೆ

## ಕ್ರಿಸ್ತನ ಮೂಲಕ ಸಂಧಾನ

ಕೆಲವು ಸಾರಿ ಇಬ್ಬರ ಮಧ್ಯದಲ್ಲಿ ವ್ಯಾಜ್ಯ ಉದ್ಭವವಾಗುತ್ತದೆ, ಅದರ ಫಲಿತವಾಗಿ ಅವರು ಬೇರ್ಪಡುತ್ತಾರೆ. ಇನ್ನು ಕೆಲವು ಸಮಯಗಳಲ್ಲಿ, ಒಬ್ಬನು ಮತ್ತೊಬ್ಬನಿಗೆ ನೋವುಂಟು ಮಾಡುತ್ತಾನೆ, ಇದರಿಂದ ನೋವುಗೊಂಡ ವ್ಯಕ್ತಿಯು ಇವನಿಂದ ದೂರವಾಗುವಂತಾಗುತ್ತದೆ. ಜನರನ್ನು ಪುನಃ ಒಂದಾಗಿಸಬೇಕೆಂದರೆ ಸಂಧಾನದ ಅವಶ್ಯಕತೆಯಿರುತ್ತದೆ.

ಪಾಪದ ಮೂಲಕ, ಮಾನವರು ದೇವರಿಗೆ ನೋವುಂಟು ಮಾಡಿದರು, ಮತ್ತು ಇದು ಮಾನವನನ್ನು ಆತನಿಂದ ಬೇರ್ಪಡಿಸಿರುತ್ತದೆ. ಸಂಧಾನಪಡಿಸುವಿಕೆಯ ಅಗತ್ಯವಿರುತ್ತದೆ. ಸಂಧಾನಪಡಿಸುವಿಕೆಯಲ್ಲಿ ಮೂರು ವ್ಯಕ್ತಿಗಳು ಭಾಗಿಯಾಗಿರುತ್ತಾರೆ: ನೋವುಂಟು ಮಾಡಿದವನು, ನೋವು ಅನುಭವಿಸಿದವನು, ಮತ್ತು ಮಧ್ಯಸ್ಥನು. ಮಾನವನ ಪಾಪದ ನಿಮಿತ್ತದಿಂದ ಉದ್ಭವವಾಗಬಹುದಾಗಿದ್ದ ಸಂಬಂಧ ಮುರಿಯಲ್ಪಡುವಿಕೆಯನ್ನು ದೇವರು ಮುಂದಾಗಿಯೇ ಕಂಡನಾದ್ದರಿಂದ, ಆತನು ಸಂಧಾನವನ್ನು ಸಾಧ್ಯವಾಗಿಸುವಂಥ ಒಂದು ಯೋಜನೆಯನ್ನು ರೂಪಿಸಿದನು.

*ಮಾನವರು ನೋವುಂಟು ಮಾಡಿದವರು.* ಆದಾಮ ಮತ್ತು ಹವ್ವಳರ ಪಾಪದ ಸಮಯದಿಂದಲೂ, ಅವರ ಸಂತತಿಯವರು ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ (ರೋಮಾ 3:23). ದೇವರ ಮಾರ್ಗಕ್ಕೆ ವಿರುದ್ಧ ಬಂಡಾಯವೇಲುವದರ ಫಲಿತವು ಆತನಿಂದ ಬೇರ್ಪಡುವದೇ ಆಗಿದೆ. ಆತನು ಬೆಳಕಾಗಿದ್ದಾನೆ, ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯು ಇಲ್ಲ (1 ಯೋಹಾನ 1:5). ಪಾಪದ ಕತ್ತಲೆಯಲ್ಲಿ ನಡೆಯುವವರು ಆತನೊಂದಿಗೆ ಅನ್ಯೋನ್ಯತೆಯಲ್ಲಿ ಇರುವದಕ್ಕೆ ಸಾಧ್ಯವಿಲ್ಲ (1 ಯೋಹಾನ 1:6; ಯೆಶಾಯ 59:1, 2). ಕ್ಷಮಾಪಣೆ ಹೊಂದಿಕೊಳ್ಳದ ಪಾಪಿಗಳು ದೇವರಿಂದ ಬಹಳ ದೂರವಾಗಿರುತ್ತಾರೆ (ಎಫೆಸ 2:13) ಮತ್ತು ಅವರ ದುಷ್ಕೃತ್ಯಗಳ ನಿಮಿತ್ತವಾಗಿ ಆತನಿಂದ ಬೇರ್ಪಟ್ಟಿರುತ್ತಾರೆ (ಕೊಲೊಸ್ಸೆ 1:21).

*ದೇವರು ನೋವು ಅನುಭವಿಸಿದವನು.* ದೇವರು ನೀತಿಯನ್ನು ಪ್ರೀತಿಸುತ್ತಾನೆ ಮತ್ತು ಪಾಪವನ್ನು ದ್ವೇಷಿಸುತ್ತಾನೆ (ಇಬ್ರಿಯ 1:9). ಆತನ ಕೋಪವು ಎಲ್ಲಾ ಭಕ್ತಿಹೀನತೆಯ ವಿರುದ್ಧವಾಗಿರುತ್ತದೆ (ರೋಮಾ 1:18). ಆತನು ಸುಳ್ಳು ಸಾಕ್ಷಿಗಳು ಮತ್ತು ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವರು ಸೇರಿದಂತೆ (ಜ್ಞಾನೋಕ್ತಿ 6:16–19), ತಮ್ಮನ್ನು ದುಷ್ಟತನದಲ್ಲಿ ತೊಡಿಗಿಸಿಕೊಳ್ಳುವವರನ್ನು ಆತನು ಹಗೆ ಮಾಡುತ್ತಾನೆ (ಕೀರ್ತನೆ 5:5; 11:5). ದೇವರ ಅವರನ್ನು ಹಗೆ ಮಾಡುವಷ್ಟರ ಮಟ್ಟಿಗೆ ಜನರು ಆತನಿಗೆ ವಿರುದ್ಧ ಬಂಡಾಯ ಏಳುತ್ತಾರೆ.

ದೇವರ ನ್ಯಾಯ ಮತ್ತು ಪರಿಶುದ್ಧತೆಯ ನಿಮಿತ್ತವಾಗಿ, ಆತನು ಪಾಪವನ್ನು ದಂಡಿಸದೆ ಬಿಡುವದಕ್ಕಾಗುವದಿಲ್ಲ. ಒಬ್ಬನು ಮತ್ತೊಬ್ಬನ ಮನೆಯೊಳಗೆ ನುಸುಳಿ ಬಂದು ಕುರ್ಚಿಗಳನ್ನು ಮತ್ತು ಮೇಜುಗಳನ್ನು ಒಡೆದು ಹಾಕಿ, ನೆಲದ ಮೇಲೆ ಹೊಲಸನ್ನು ಬಿಸಾಡುವದಾದರೆ ಮತ್ತು ಮನೆಯಲ್ಲಿ ಇತರ ವಸ್ತುಗಳನ್ನು ನಾಶಗೊಳಿಸಿದರೆ, ನ್ಯಾಯದ ಪ್ರಕಾರವಾಗಿ ಆತನು ಮಾಡಿದ ತಪ್ಪನ್ನು ಸರಿಪಡಿಸುವದು ಅಗತ್ಯವಾಗುತ್ತದೆ. ಇದರರ್ಥವು

ಹಾನಿಮಾಡಲ್ಪಟ್ಟವನಿಗೆ ಮನೆಯಲ್ಲಿದ್ದದ್ದನ್ನು ನಾಶಮಾಡಿದ್ದಕ್ಕಾಗಿ ಹಣವನ್ನು ಕೊಡಬೇಕು ಎಂದಾಗುತ್ತದೆ.

ಪಾಪವು ದೇವರಿಗೆ ನೋವುಂಟು ಮಾಡುತ್ತದೆ. ದೇವರ ನ್ಯಾಯಾಲಯದಲ್ಲಿ, ಪಾಪಕ್ಕೆ ಸಿಕ್ಕುವ ನ್ಯಾಯವಾದ ದಂಡನೆಯು ಮರಣವೇ (ರೋಮಾ 6:23). ಎಲ್ಲರೂ ಮರಣಕ್ಕೆ ಯೋಗ್ಯರಾಗಿದ್ದಾರೆ, ಯಾಕೆಂದರೆ ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ (3:23). ದೇವರಿಗೆ ಯಾವುದು ನೋವುಂಟು ಮಾಡುತ್ತದೆ ಮತ್ತು ಮರಣವನ್ನು ತರುತ್ತದೆಂಬುದನ್ನು ತಿಳಿದುಕೊಳ್ಳಬೇಕೆಂದರೆ, ಆತನು ಯಾವದನ್ನು ಪಾಪವೆಂದು ಪರಿಗಣಿಸುತ್ತಾನೆಂಬುದನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು. ನಾವು ನಮಗೆ ಪ್ರಶ್ನಾರ್ಹವಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಪಾಪವನ್ನು ಮಾಡಬಲ್ಲವರಾಗಿದ್ದೇವೆ (1 ಯೋಹಾನ 5:17); ಅಥವಾ ಮಾಡಬೇಕಾದಂಥ ಒಳ್ಳೇ ಕಾರ್ಯಗಳನ್ನು ಮಾಡುವದಕ್ಕೆ ವಿಫಲರಾಗುವ ಮೂಲಕ ಪಾಪಕ್ಕೊಳಗಾಗಬಲ್ಲೆವು (ಯಾಕೋಬ 4:17).

ಪಾಪವನ್ನು ದೇವರ ಮಾನದಂಡದಿಂದ ಅಳೆಯುವ ವೇಳೆ, ನಾವು ಆತನೊಂದಿಗೆ ಈ ತೀರ್ಮಾನಕ್ಕೆ ಬರಬೇಕಾಗುತ್ತದೆ, ಏನೆಂದರೆ "ನೀತಿವಂತನು ಇಲ್ಲ, ಒಬ್ಬನೂ ಇಲ್ಲ" ಎಂಬದೆ (ರೋಮಾ 3:10). ಇದರರ್ಥವೇನೆಂದರೆ ನಾವೆಲ್ಲರೂ ದೇವರಿಗೆ ನೋವುಂಟು ಮಾಡಿದವರೇ ಆಗಿದ್ದೇವೆ. ನಮ್ಮಲ್ಲಿ ಪಾಪಗಳಿಲ್ಲ ಅಥವಾ ಪಾಪ ಮಾಡಿದವರಲ್ಲ ಎಂದು ನಾವು ಹೇಳುವದಾದರೆ, ನಾವು ನಮ್ಮನ್ನು ಮೋಸ ಪಡಿಸಿಕೊಳ್ಳುವವರಾಗುತ್ತೇವೆ ಮತ್ತು ದೇವರನ್ನು ಸುಳ್ಳುಗಾರನೆಂದು ಕರೆಯುವವರಾಗುತ್ತೇವೆ (1 ಯೋಹಾನ 1:8, 10). ನಮ್ಮ ಪಾಪಗಳ ಕಾರಣದಿಂದ, ನಾವು ಅನೀತಿವಂತರಾಗಿದ್ದೇವೆ. ನಮ್ಮಲ್ಲಿ ಏನೂ ಇಲ್ಲ. ನಾವು ಮಾಡಿದ ಪಾಪಗಳನ್ನು ಸರಿ ಮಾಡುವದಕ್ಕಾಗಿ ನಾವು ಏನನ್ನೂ ಮಾಡುವದಕ್ಕೆ ಸಾಧ್ಯವಿರುವದಿಲ್ಲ (ಎಫೆಸ 2:8, 9).

*ಯೇಸುವು ನಮ್ಮ ಮಧ್ಯಸ್ಥನು* (1 ತಿಮೊಥೆ 2:5). ದೇವರು ಮತ್ತು ನಮ್ಮ ನಡುವೆ ಸ್ನೇಹ ಸಂಬಂಧವನ್ನುಂಟು ಮಾಡುವದಕ್ಕಾಗಿ ಯೇಸು ಮಾತ್ರವೇ ನಮ್ಮ ಏಕೈಕ ಮಧ್ಯಸ್ಥನಾಗಬಲ್ಲನು, ಯಾಕೆಂದರೆ: ಆತನು ಮನುಷ್ಯ ಮತ್ತು ದೇವರಿಗೆ ಆತನು ಸಮಾನವಾಗಿ ಸಂಬಂಧ ಹೊಂದಿದ್ದಾನೆ, ಮತ್ತು ಆತನ ಮೌಲ್ಯವು ಇಡೀ ಮಾನವ ಕುಲದ ಮೌಲ್ಯವನ್ನು ಮೀರಿಸುವಂಥದ್ದಾಗಿದೆ.

1. ಯೇಸುವು ನಮ್ಮನ್ನು ಅರ್ಥಮಾಡಿಕೊಂಡು ನಮಗೆ ಮಧ್ಯಸ್ಥನಾಗುವದಕ್ಕಾಗಿ ಮಾನವನಾದನು. ಆತನು "ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾಗುವ"ದಕ್ಕಾಗಿ ನಮಗೆ ಸಮಾನನಾದನು (ಇಬ್ರಿಯ 2:17). ಆತನ ಮನಸ್ಸು ನಮ್ಮ ಬಲಹೀನತೆಯಿಂದ ಸ್ಪರ್ಶಿಸಲ್ಪಡಬಲ್ಲದು ಯಾಕೆಂದರೆ ಆತನು "ಸರ್ವವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ" (ಇಬ್ರಿಯ 4:15). ಆತನು ಮಾನವನಾಗದೆ ಇದ್ದಿದ್ದರೆ, ಆತನು ನಮ್ಮ ಅವಸ್ಥೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ಮತ್ತು ನ್ಯಾಯಯುತವಾಗಿ ಮಧ್ಯಸ್ಥಿಕೆಯನ್ನು ವಹಿಸಿಕೊಳ್ಳುವದಕ್ಕೆ ಅಶಕ್ತನಾಗಿರುತ್ತಿದ್ದನು.
2. ಆತನು ದೇವತ್ವವುಳ್ಳವನಾಗಿರುವದರ ಅರ್ಥವು ಆತನು ತಂದೆಗೆ

ಸಮಾನನಾಗಿರುತ್ತಾನೆ ಮತ್ತು ನಮ್ಮ ಮಧ್ಯಸ್ಥನಾಗಿ ತಂದೆಯಿಂದ ಗೌರವಿಸಲ್ಪಡಬಲ್ಲನು ಎಂದಾಗಿರುತ್ತದೆ. ಯೇಸುವು ಮನುಷ್ಯ ಮತ್ತು ದೇವರಿಗೆ ಸಮಾನವಾಗಿ ಸಂಬಂಧ ಹೊಂದಿರುತ್ತಾನೆ. ನರಾವತಾರವೆತ್ತುವ ಮೂಲಕ (ಯೋಹಾನ 1:14) ಆತನು ಮನುಷ್ಯಕುಮಾರನಾದನು (ಮತ್ತಾಯ 9:6). ಅದೇ ಸಮಯದಲ್ಲಿ ಆತನು ದೇವಕುಮಾರನು ಆಗಿದ್ದಾನೆ (ಲೂಕ 1:35). ಆತನು ನ್ಯಾಯಯುತವಾಗಿಯೇ ಮನುಷ್ಯ ಮತ್ತು ದೇವರ ನಡುವೆ ಮಧ್ಯಸ್ಥಿಕೆಯನ್ನು ವಹಿಸಿಕೊಳ್ಳಬಲ್ಲನು.

3. ಯೇಸುವು ಮನುಷ್ಯನ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡು ಆ ಪಾಪಗಳಿಗೋಸ್ಕರ ಮರಣದ ದಂಡನೆಯನ್ನು ಅನುಭವಿಸುವ ಮೂಲಕ ಮನುಷ್ಯ ಮತ್ತು ದೇವರ ನಡುವೆ ಒಂದು ಸ್ನೇಹ ಸಂಬಂಧವನ್ನು ಸಾಧ್ಯಗೊಳಿಸಿದನು. ಪಾಪರಹಿತನಾದ ಮನುಷ್ಯಕುಮಾರ ಮತ್ತು ದೇವಕುಮಾರನಾಗಿ, ನಾವು ನೀತಿವಂತರಾಗಿ ಮಾಡಲ್ಪಡುವಂತಾಗಲು ನಮ್ಮ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡನು (1 ಕೊರಿಂಥ 15:3; 2 ಕೊರಿಂಥ 5:21; 1 ಪೇತ್ರ 2:24; 3:18).

4. ಯೇಸುವು ಲೋಕದ ಪಾಪಗಳನ್ನು ನಿವಾರಿಸುವದಕ್ಕಾಗಿ ದೇವರು ನೇಮಿಸಿ ಕುರಿಯಾಗಿದ್ದಾನೆ (ಯೋಹಾನ 1:29). ಒಬ್ಬ ಮನುಷ್ಯನ ಮರಣವು, ವಿಶೇಷವಾಗಿ ಒಬ್ಬ ಪಾಪಭರಿತ ಮನುಷ್ಯನ ಮರಣವು ಇಡೀ ಲೋಕದ ಪಾಪಗಳಿಗೆ ಈಡು ಸಲ್ಲಿಸಲು ಸಾಧ್ಯವಿಲ್ಲ. ಅದಕ್ಕೊಂದು ಹೊರತುಪಡಿಸುವಿಕೆಯನ್ನು ಮಾಡಬೇಕೆಂದರೆ, ಒಬ್ಬನು ಮಾನವರಿಗೆ ಸಮಾನವಾದ ಅಥವಾ ಅವರಿಗಿಂತ ಹೆಚ್ಚಿನ ಮೌಲ್ಯವುಳ್ಳವನಾಗಿರಬೇಕು. ಯೇಸು ಅಂತಹ ಒಬ್ಬ ವ್ಯಕ್ತಿಯಾಗಿದ್ದನು, ಯಾಕೆಂದರೆ ಆತನು ಇಡೀ ಲೋಕಕ್ಕಿಂತಲೂ ಹೆಚ್ಚಿನ ಮೌಲ್ಯವುಳ್ಳವನಾಗಿದ್ದನು; ಆದುದರಿಂದ, ಆತನು ನಮ್ಮ ಎಲ್ಲಾ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡು ಪಾಪಕ್ಕೆ ಈಡು ಸಲ್ಲಿಸುವದಕ್ಕೆ ಶಕ್ತನಾದನು. ಆತನ ಮರಣದ ಮೂಲಕ ಕ್ಷಮಿಸಲ್ಪಡುವವರಾಗುವಂತೆ ಮಾರ್ಗವನ್ನು ತೆರೆದನು. ದೇವರ ಸಂಗಡ ಸ್ನೇಹಿತರಾಗುವಂತೆ ಮತ್ತು ಆತನ ಸಂಗಡ ಸಂಧಾನಪಡಿಸಿಕೊಳ್ಳುವದನ್ನು ಆತನು ಸಾಧ್ಯವಾಗಿಸಿದನು.

5. ಶಿಲುಬೆಯ ಮೇಲೆ ಸುರಿಸಲ್ಪಟ್ಟ ರಕ್ತದ ಮೂಲಕ, ಯೇಸು ನಮಗೆ ದೇವರ ಸಂಗಡ ಸಮಾಧಾನದಿಂದಿರುವದಕ್ಕೆ ಒಂದು ಮಾರ್ಗವನ್ನು ಒದಗಿಸಿದನು (1:20), ನಾವು ದೇವರ ಮುಂದೆ ಪರಿಶುದ್ಧರಾಗಿಯೂ ನಿರ್ದೋಷಿಗಳಾಗಿಯೂ ನಿರಪರಾಧಿಗಳಾಗಿಯೂ ನಿಲ್ಲಿಸಲ್ಪಡುವದಕ್ಕೆ ನಮ್ಮನ್ನು ಸಂಭಾವ್ಯರನ್ನಾಗಿ ಮಾಡಿದನು (1:22). ಇದೇ ವಾಗ್ದಾನವು ರಕ್ಷಿಸಲ್ಪಟ್ಟಿರುವ ಸಮೂಹವಾದ ಸಭೆಗೆ ಮಾಡಲ್ಪಟ್ಟಿದೆ (ಎಫೆಸ 5:23-27).

ನಾವು ನೋವುಂಟು ಮಾಡಿದವರು, ಪಾಪಿಗಳು, ಮತ್ತು ನಮ್ಮ ಪಾಪಗಳ ನಿಮಿತ್ತವಾಗಿ ದೇವರು ನೋವು ಅನುಭವಿಸಿದವನು. ಪಾಪದ ಸಂಗಡದ ನಮ್ಮ ಸ್ನೇಹದ ನಿಮಿತ್ತ, ನಾವು ದೇವರಿಗೆ ವೈರಿಗಳಾದೆವು (ಯಾಕೋಬ 4:4); ಅದರೆ ಯೇಸು ದೇವರ ಸಂಗಡ ಸ್ನೇಹವನ್ನು ಮಾಡಿಕೊಳ್ಳುವದನ್ನು ಸಾಧ್ಯಗೊಳಿಸಿದ್ದಾನೆ. ದೇವರು ಲೋಕದ ಮೇಲೆ ತಾನು ಇಟ್ಟಿರುವ ಪ್ರೀತಿಯ ಕಾರಣದಿಂದ (ಯೋಹಾನ 3:16) ಇದನ್ನು ಯೇಸುವಿನ ಮುಖಾಂತರ ಮಾಡಿದನು (2 ಕೊರಿಂಥ 5:18, 19).

ದೇವರು ನಮ್ಮನ್ನು ತನ್ನೊಂದಿಗೆ ಸಂಧಾನಪಡಿಸಿಕೊಳ್ಳುವದಕ್ಕಾಗಿ ತಾನು

ಮಾಡಬೇಕೆಂದು ಯೋಜಿಸಿದ್ದನ್ನೆಲ್ಲಾ ಮತ್ತು ಅಗತ್ಯವಾದದ್ದನ್ನೆಲ್ಲಾ ಮಾಡಿರುತ್ತಾನೆ. ಆತನು ಸಂಧಾನ ವಾಕ್ಯದ ಮೂಲಕವಾಗಿ ಈ ಸಂಧಾನದ ಬಗ್ಗೆ ತಿಳುವಳಿಕೆಯನ್ನು ನಮಗೆ ಒದಗಿಸಿದ್ದಾನೆ, ಅದು ನಮಗೆ ಇನ್ನು ಮೇಲೆ ನಮ್ಮ ಅಪರಾಧಗಳು ನಮ್ಮ ಲೆಕ್ಕಕ್ಕೆ ಹಾಕಲ್ಪಡುವದಿಲ್ಲ ಎಂಬುದನ್ನು ಪ್ರಕಟಗೊಳಿಸಿತು (2 ಕೊರಿಂಥ 5:19). ಹೇಗೂ, ಸಂಧಾನಪಡಿಸಿಕೊಳ್ಳುವಿಕೆಯು ನಮ್ಮಿಂದ ಒಂದು ಪ್ರತಿಕ್ರಿಯೆಯನ್ನ ಕೇಳುತ್ತದೆ. ಇದನ್ನು ಗ್ರಹಿಸಿಕೊಂಡವನಾಗಿ, ಪೌಲನು ಈ ಮನವಿಯನ್ನು ಮಾಡುತ್ತಾನೆ: "ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ" (2 ಕೊರಿಂಥ 5:20).

6. ದೇವರು ಮತ್ತು ಮನುಷ್ಯನು ಒಟ್ಟಾಗಿ ಸ್ನೇಹ ಸಂಬಂಧದಲ್ಲಿ ಸಂಧಿಸಬಹುದಾದ ಸ್ಥಳವೆಂದರೆ ಅದು ಕ್ರಿಸ್ತನಲ್ಲಿಯೇ, ಅದು ಸಂಧಾನಪಡಿಸುವಿಕೆಯ ಸ್ಥಳವಾಗಿದೆ. "ದೇವರು . . . ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದನು" (2 ಕೊರಿಂಥ 5:19). ದೇವರನ್ನು ಸಂಧಿಸಿ ಆತನ ಸ್ನೇಹಿತರಾಗಬೇಕೆಂದರೆ, ನಾವು ಕ್ರಿಸ್ತನಲ್ಲಿ ಇರತಕ್ಕದ್ದು. ನಾವು ಕ್ರಿಸ್ತನನ್ನು ದೀಕ್ಷಾಸ್ನಾನ ಮೂಲಕ ಪ್ರವೇಶಿಸುತ್ತೇವೆ (ರೋಮಾ 6:3; ಗಲಾತ್ಯ 3:26, 27). ನಾವು ಕ್ರಿಸ್ತನಲ್ಲಿ ನೆಲೆಗೊಳ್ಳಬೇಕಿದ್ದರೆ, ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವ ಅಗತ್ಯವಿರುತ್ತದೆ (1 ಯೋಹಾನ 2:3-5).

ನಮ್ಮಲ್ಲಿ ಒಬ್ಬರೂ ನೀತಿವಂತರಲ್ಲ. ನಮ್ಮ ಪಾಪಗಳು ನಮ್ಮನ್ನು ದೇವರಿಂದ ಬೇರ್ಪಡಿಸುತ್ತವೆ. ಈ ಕಾರಣಕ್ಕೆ ನಮಗೆ ನಮ್ಮ ಮಧ್ಯಸ್ಥನಾದ ಕ್ರಿಸ್ತನ ಅಗತ್ಯವಿರುತ್ತದೆ. ಯೇಸು ತಾನು ಯಾರಾಗಿದ್ದಾನೆಂಬದರ ನಿಮಿತ್ತವಾಗಿ ಸಂಧಾನವನ್ನು ಸಫಲಗೊಳಿಸುವದಕ್ಕೆ ಶಕ್ತನಾಗಿರುತ್ತಾನೆ.

## ಸಂಧಾನ ಮತ್ತು ಕ್ರಿಸ್ತನ ಸರ್ವಸಂಪೂರ್ಣತೆ (1:20)

ಬಹುಶಃ ಕ್ರಿಸ್ತನಲ್ಲಿ ಸರ್ವಸಂಪೂರ್ಣತೆಯು ವಾಸವಾಗಿರುವದರ ಅತ್ಯಂಥ ದೊಡ್ಡ ಪ್ರಯೋಜನವೆಂದರೆ ಸಂಧಾನವಾಗಿರುತ್ತದೆ. ಪಾಪದ ಕಾರಣದಿಂದ ಮಾನವ ಜನಾಂಗದೊಳಗಿರುವ ಪ್ರತಿಯೊಬ್ಬರು ದೇವರಿಂದ ಬೇರ್ಪಡಿಸಲ್ಪಟ್ಟಿರುತ್ತಾರೆ (ರೋಮಾ 3:10, 23). ತಮ್ಮ ಪಾಪಗಳಲ್ಲಿ ಸಾಯುವವರು ಯೇಸುವಿನ ಸಂಗಡ ಜೀವಿಸಲಾರರು. ವಿಶ್ವದ ಸೃಷ್ಟಿಗೆ ಮುನ್ನ ದೇವರ ಯೋಜನೆಯು ಏನಾಗಿತ್ತೆಂದರೆ ಯೇಸುವಿನ ಮರಣದ ಮೂಲಕ ಸಂಧಾನವನ್ನು ಒದಗಿಸುವದೇ.

ಯೇಸುವಿನಲ್ಲಿರುವ ಸರ್ವಸಂಪೂರ್ಣತೆಯ ಕಾರಣದಿಂದ ಸಂಧಾನವು ಸಾಧ್ಯವಾಗುತ್ತದೆ (ವ. 20). ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದ ಮೂಲಕ ಸಮಾಧಾನವು ಲಭ್ಯಗೊಳಿಸಲ್ಪಟ್ಟಿದೆ (ವ. 20). ದೇವರು ರಕ್ತಸುರಿಸುವಿಕೆಯ ಮೂಲಕ ಮಾತ್ರವೇ ಪಾಪವು ಕ್ಷಮಿಸಲ್ಪಡಬೇಕೆಂದು ಕಟ್ಟಪ್ಪಣೆ ಮಾಡಿರುತ್ತಾನೆ (ಇಬ್ರಿಯ 9:22). ಪ್ರಾಣಿಗಳ ರಕ್ತವು ಪಾಪವನ್ನು ನಿವಾರಿಸುವದಕ್ಕೆ ಆಗಲಿಲ್ಲ (ಇಬ್ರಿಯ 10:4). ಯೇಸುವಿನ ರಕ್ತವು ಮಾತ್ರವೇ ದೇವರ ಸನ್ನಿಧಿಯೊಳಗೆ ಪ್ರವೇಶವನ್ನು ಒದಗಿಸಬಲ್ಲದು (ಇಬ್ರಿಯ 10:19, 20).

ಯೇಸು ತನ್ನ ರಕ್ತದ ಮೂಲಕ, ದೇವರಿಂದ ಬೇರ್ಪಟ್ಟಿರುವವರಿಗೆಲ್ಲಾ ಸಂಧಾನವಾಗುವದಕ್ಕಾಗಿ ಒಂದು ಅವಕಾಶವನ್ನು ಒದಗಿಸಿಸದನು. ಪಾಪವನ್ನು

ನಿವಾರಿಸುವದು ಸಂಧಾನವನ್ನು ಸಾಧ್ಯಗೊಳಿಸುತ್ತದೆ. ಒಬ್ಬ ಉದ್ಯಮಿಯು ತನ್ನ ಪಾಲುದಾರನು ಉದ್ಯಮದ ಅಗತ್ಯತೆಗಳನ್ನು ಒದಗಿಸುವದಕ್ಕೆ ಸಹಾಯ ಮಾಡುವದಿಲ್ಲ ಎಂಬ ಕಾರಣಕ್ಕಾಗಿ ಪಾಲುದಾರಿಕೆಯೊಂದನ್ನ ರದ್ದುಗೊಳಿಸಬಹುದು. ಪಾಲುದಾರನು ಎಲ್ಲಿಯ ವರೆಗೆ ಸೋಮಾರಿಯಾಗಿದ್ದು ಕೆಲಸವನ್ನು ಮಾಡುವದಿಲ್ಲವೋ, ಆತನ ಸಹಪಾಲುದಾರನು ಅವನೊಂದಿಗೆ ವ್ಯವಹಾರವನ್ನು ಮಾಡುವದಕ್ಕೆ ನಿರಾಕರಿಸಬಹುದು. ಆತನು ಕೆಲಸ ಮಾಡುವದಾದರೆ ಮತ್ತು ಬಾಕಿಯನ್ನು ಸಂದಾಯ ಮಾಡುವದಾದರೆ ಆತನನ್ನ ಪುನಃ ಪಾಲುದಾರಿಕೆಯಲ್ಲಿ ಸೇರಿಸಿಕೊಳ್ಳಬಹುದು. ಯೇಸು ನಮ್ಮ ಪಾಪದ ಸಾಲವನ್ನ ತೀರಿಸಿದ್ದಾನೆ ಮತ್ತು ದೇವರ ಸಂಗಡ ಸ್ನೇಹ ಸಂಬಂಧವನ್ನು ಸಾಧ್ಯಗೊಳಿಸಿರುತ್ತಾನೆ.

## ಸಂಧಾನ ಮತ್ತು ದ್ವೇಷಮನಸ್ಸು (1:21)

ದ್ವೇಷಮನಸ್ಸುಳ್ಳವರು ದೇವರ ಚಿತ್ತವನ್ನು ಮಾಡುವದನ್ನು ಆರಿಸಿಕೊಳ್ಳುವದಿಲ್ಲ. ಅವರು ಮೊಂಡುತನದ ಮತ್ತು ಪಶ್ಚಾತ್ತಾಪವಿಲ್ಲದ ಹೃದಯಗಳನ್ನು ಹೊಂದಿದ್ದಾರೆ; ಅವರು "ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೆ" (ರೋಮಾ 2:5, 8). ಒಬ್ಬ ವ್ಯಕ್ತಿಯು ಎಲ್ಲಿಯ ವರೆಗೆ ತನ್ನ ಹಾಗೂ ದೇವರ ನಡುವೆ ಪಾಪವು ನಿಲ್ಲುವಂತೆ ಬಿಡುತ್ತಾನೋ ಅಲ್ಲಿಯ ವರೆಗೆ, ಆತನು ದೇವರಿಗೆ ಒಬ್ಬ ವೈರಿಯಾಗಿರುವನು (ಯಾಕೋಬ 4:4).

ಜನರು ದುಷ್ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವಾಗ ದೇವರಿಂದ ಬೇರ್ಪಟ್ಟವರಾಗಿರುತ್ತಾರೆ. ದೇವರ ಚಿತ್ತವನ್ನು ಮಾಡುವದಕ್ಕೆ ವಿಫಲವಾಗುವದು ಅವರನ್ನು ಆತನ ದೃಷ್ಟಿಯಲ್ಲಿ ಕೆಟ್ಟವರನ್ನಾಗಿ ಮಾಡುತ್ತದೆ. ದೇವರು ನೀತಿಯನ್ನು ಪ್ರೀತಿಸುತ್ತಾನೆ ಮತ್ತು ಅಧರ್ಮವನ್ನು ಹಗೆ ಮಾಡುತ್ತಾನೆ (ಇಬ್ರಿಯ 1:9).

ಒಬ್ಬ ತಾಯಿಯು ತನ್ನ ಮಗುವನ್ನು ಗಾಢವಾಗಿ ಪ್ರೀತಿಸುತ್ತಾಳೆ. ಹೇಗೂ, ಆ ಮಗುವು ಆಕೆಗೆ ಪವಿತ್ರವಾದ ಎಲ್ಲವನ್ನೂ ನಿರಂತರವಾಗಿ ತುಳಿದಾಡುತ್ತಿರುವದಾದಲ್ಲಿ, ಆಕೆಯು ಆ ಮಗುವಿಗೆ, ಆತನು ಎಲ್ಲಿಯ ವರೆಗೆ ಆಕೆಗೆ ನೋವುಂಟು ಮಾಡುತ್ತಾನೋ ಅಲ್ಲಿಯ ವರೆಗೆ ಆತನೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳುವದಿಲ್ಲ ಎಂದು ಹೇಳುವ ಮೂಲಕ ತನ್ನ ಅಸಮಾಧಾನವನ್ನು ತಿಳಿಸುತ್ತಾಳೆ. ದೇವರು ಪಾಪದ ಕಡೆಗೆ ಕಟುವಾದ ಅನಿಸಿಕೆಗಳನ್ನು ಹೊಂದಿದ್ದಾನೆ. ದೇವರಿಗೆ ಅವಿಧೇಯರಾಗುವವರು ಅಂಥ ಬಂಡಾಯದ ಮೂಲಕ ತಮ್ಮನ್ನು ಆತನಿಂದ ಬೇರ್ಪಡಿಸಿಕೊಳ್ಳುತ್ತಾರೆ.

## ಸಂಧಾನ ಮತ್ತು ಮರುಸೃಷ್ಟಿ (1:22, 23)

ಯೇಸುವಿನ ಮೂಲಕ ದೊರಕುವ ಸಂಧಾನವು ನಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ಮಾಡುತ್ತದೆ (ವ. 22). ಒಂದು ಬಟ್ಟಲು ನೀರಿನಲ್ಲಿರುವ ಒಂದು ಮರಣಾಂತಿಕ ಸೂಕ್ಷ್ಮ ಜೀವಿಯಿದ್ದರೆ ಆ ನೀರು ಕುಡಿಯುವದಕ್ಕೆ ಇಷ್ಟವಾಗುವದಿಲ್ಲ. ಅದೇ ರೀತಿಯಲ್ಲಿಯೇ, ಪಾಪವು ಒಂದು ಭಾಗವನ್ನಷ್ಟೆ ಅಲ್ಲ, ಆದರೆ ಇಡೀ ಆತ್ಮವನ್ನೇ ಕಲುಷಿತಗೊಳಿಸುತ್ತದೆ. ಆತ್ಮೀಕವಾಗಿ ಹೊಲೆಯಾಗಿರುವವರು ಪರಲೋಕವನ್ನು ಪ್ರವೇಶಿಸಲಾರರು (ಪ್ರಕಟನೆ 21:27). ಯೇಸು

ತನ್ನ ಮರಣದ ಮೂಲಕ, ನಾವು ನ್ಯಾಯತೀರ್ಪಿನ ದಿನದಂದು ದೋಷವಿಲ್ಲದವರಾಗಿ ಕಾಣುವಂತಾಗಲು ಎಲ್ಲಾ ಪಾಪದ ನಿವಾರಣೆಯನ್ನು ಸಾಧ್ಯವಾಗಿಸಿದನು.

ಟೈಪಿಂಗ್ ಮಾಡುವ ವ್ಯಕ್ತಿಯೊಬ್ಬನು ಅನೇಕ ತಪ್ಪುಗಳನ್ನು ಮಾಡಬಹುದು, ಆದರೆ ಪ್ರತಿಯೊಂದು ತಪ್ಪು ಸರಿಪಡಿಸಲ್ಪಟ್ಟರೆ, ಆತನೊಂದು ತಪ್ಪಿಲ್ಲದ ಪುಟವನ್ನು ರಚಿಸಬಲ್ಲನು. ಯೇಸು ತಾನು ಸುರಿಸಿದ ರಕ್ತದಿಂದ ನಮ್ಮ ಜೀವಿತಗಳನ್ನು ಪಾಪರಹಿತಗೊಳಿಸಬಲ್ಲನು. ಒಮ್ಮೆ ಪಾಪಗಳು ಕ್ಷಮಿಸಲ್ಪಟ್ಟರೆ, ಅವುಗಳನ್ನು ಇನ್ನೆಂದಿಗೂ ನೆನಪಿಸಿಕೊಳ್ಳಲಾಗದು (ಇಬ್ರಿಯ 8:12). ಯೇಸು ತನ್ನ ಮುಂದೆ ಯಾವ ಪಾಪವೂ ಇಲ್ಲದಂತೆ ನಿಲ್ಲಿಸಿಕೊಳ್ಳಲಿರುವ ಜನರ ಸಮೂಹವು ಸಭೆಯೇ ಆಗಿದೆ (ಎಫೆಸ 5:25-27). ಆತನು ತನ್ನ ವಾಕ್ಯದ ಮೂಲಕ ಸಭೆಯನ್ನು ಶುದ್ಧಮಾಡುವದಕ್ಕೆ ತನ್ನನ್ನೇ ಒಪ್ಪಿಸಿಕೊಟ್ಟ ಕಾರಣ ಆತನು ಇದನ್ನು ಮಾಡಬಲ್ಲವನಾಗಿದ್ದಾನೆ. ಬ್ಯಾಂಕ್‌ನಲ್ಲಿ ಹಣವನ್ನು ಇಟ್ಟರೆ ಮಾತ್ರವೇ ಚೆಕ್‌ಗೆ ಬೆಲೆಯಿರುತ್ತದೆ. ಅದೇ ರೀತಿಯಲ್ಲಿಯೇ, ಜನರ ಪಾಪವನ್ನು ತೊಳೆಯುವದಕ್ಕೆ ಸ್ವತಃ ನೀರು ಮತ್ತು ವಾಕ್ಯಕ್ಕೆ ಯಾವ ಬಲವೂ ಇರುವದಿಲ್ಲ; ಆದರೆ ಯೇಸುವಿನ ರಕ್ತದ ಶಕ್ತಿಯ ನಿಮಿತ್ತವಾಗಿ ಅವುಗಳ ಮೂಲಕ ಜನರು ಕ್ಷಮಿಸಲ್ಪಡುತ್ತಾರೆ.

ನಂಬಿಕೆಯಲ್ಲಿ ನೆಲೆಗೊಳ್ಳುವವರು (ವ. 23) ಪರಿಶುದ್ಧರೂ ನಿರ್ದೋಷಿಗಳೂ ನಿರಪರಾಧಿಗಳೂ ಆಗಿ ನಿಲ್ಲಿಸಲ್ಪಡುವರು. ಈ ವಾಗ್ದಾನವು ಯೇಸುವಿಗೆ ನಂಬಿಗಸ್ತರಾಗಿ ಉಳಿಯುವದರ ಮೇಲೆ ಅವಲಂಭಿತವಾಗಿರುತ್ತದೆ. ಆತನು ಮದಲಿಂಗನು; ಸಭೆಯ ಪ್ರತಿಯೊಬ್ಬ ಸದಸ್ಯನು, ಕ್ರಿಸ್ತನ ಮದಲಗಿತ್ತಿಯಾಗಿದ್ದು ಗಂಡನಿಗೆ ಹೆಂಡತಿ ಹೇಗೋ ಹಾಗೆಯೇ ಯೇಸುವಿಗೆ ಸಂಬಂಧ ಹೊಂದಿರುತ್ತಾನೆ. ಒಬ್ಬ ಗಂಡನು ನಂಬಿಗಸ್ತಳಲ್ಲದ ಹೆಂಡತಿಗೆ ವಿಚ್ಛೇದನ ಕೊಡಬಹುದಾಗಿದೆ (ಮತ್ತಾಯ 19:9), ಮತ್ತು ತನಗೆ ಅಪನಂಬಿಗಸ್ತರಾಗಿರುವ ಕ್ರೈಸ್ತರ ಸಂಗಡ ಯೇಸು ತನ್ನ ಸಂಬಂಧವನ್ನು ಕಡಿದುಕೊಳ್ಳುವನು (ಯೋಹಾನ 15:4-6). ಯೇಸುವಿನ ರಕ್ತದಲ್ಲಿರುವ ಪರಿಪೂರ್ಣಗೊಳಿಸುವ ಶಕ್ತಿಯ ನಿಮಿತ್ತವಾಗಿ, ನಂಬಿಕೆಯಲ್ಲಿ ನೆಲೆಗೊಳ್ಳುವವರು ಒಬ್ಬ ಮದಲಗಿತ್ತಿಯು ಮದಲಿಂಗನಿಂದ ಆನಂದಪೂರ್ವಕವಾಗಿ ಸ್ವೀಕರಿಸಿಕೊಳ್ಳಲ್ಪಡುವ ರೀತಿಯಲ್ಲಿಯೇ ಸ್ವೀಕರಿಸಿಕೊಳ್ಳಲ್ಪಡುವರೆಂಬ ಭರವಸೆಯನ್ನು ಹೊಂದಬಹುದಾಗಿದೆ.

## ನಂಬಿಕೆಯಲ್ಲಿ ನೆಲೆಗೊಳ್ಳಿರಿ (1:23)

ನಾವು ದೇವರ ಮುಂದೆ ನಿರ್ದೋಷಿಗಳಾಗಿ ನಿಲ್ಲಿಸಲ್ಪಡುವದು ಯೇಸುವಿನ ಕಾರ್ಯದ ಮೇಲೆ ಮತ್ತು ನಮ್ಮ ನಂಬಿಗಸ್ತಿಕೆಯ ಮೇಲೆ ಅವಲಂಭಿತವಾಗಿರುತ್ತದೆ. ದೇವರೊಂದಿಗಿನ ನಮ್ಮ ನೆಲೆಯು ಶರತ್ತುಬದ್ಧವಾದದ್ದೆಂದು ಸೂಚಿಸುವದಕ್ಕೆ ಪೌಲನು "ದಾದರೆ" ಎಂಬ ಪದವನ್ನು ಬಳಸಿದನು (ವ. 23). ನಾವು ರಕ್ಷಣೆ ಹೊಂದುವವರಾಗುವದಕ್ಕಾಗಿ ನಂಬಿಕೆಯನ್ನು ಕಾಪಾಡಿಕೊಳ್ಳಬೇಕು ಎಂಬದಾಗಿ ಯೇಸು ಮತ್ತು ಹೊಸ ಒಡಂಬಡಿಕೆಯ ಅನೇಕ ಲೇಖಕರು ಎಚ್ಚರಿಕೆಗಳನ್ನು ನಮಗೆ ಕೊಟ್ಟಿರುತ್ತಾರೆ.

ದೇವರ ಆಶೀರ್ವಾದಗಳನ್ನು ಹೊಂದಿಕೊಳ್ಳಬೇಕಾದರೆ, ನಾವು ಮಾಡತಕ್ಕದ್ದೇನೆಂದರೆ . . .

ಯೇಸುವಿನ ಶಿಷ್ಯರಾಗಿರುವದಕ್ಕಾಗಿ ಆತನ ಮಾತುಗಳಲ್ಲಿ ನೆಲೆಗೊಂಡಿರಬೇಕು,

ಮತ್ತು ಬಿಡುಗಡೆಗೊಂಡವರಾಗಿ ಮಾಡಲ್ಪಡುವದಕ್ಕೆ ಸತ್ಯವನ್ನು ತಿಳಿದುಕೊಳ್ಳಬೇಕು (ಯೋಹಾನ 8:31, 32).

ಯೇಸುವಿನಲ್ಲಿ ನೆಲೆಗೊಂಡು ಆತನಿಗೋಸ್ಕರ ಫಲವನ್ನು ಕೊಡಬೇಕು (ಯೋಹಾನ 15:2-6).

ಯೇಸುವಿನ ಪ್ರೀತಿಯಲ್ಲಿ ನೆಲೆಗೊಳ್ಳುವದಕ್ಕಾಗಿ ಆತನ ಆಜ್ಞೆಗಳನ್ನು ಕೈಕೊಂಡು ನಡೆಯಬೇಕು (ಯೋಹಾನ 15:9, 10).

ಪ್ರಭಾವ, ಮಾನ, ನಿರ್ಲಯತ್ವಗಳನ್ನು ಹೊಂದುವಕ್ಕಾಗಿ ಒಳ್ಳೇದನ್ನು ಬೇಸರಗೊಳ್ಳದೆ ಮಾಡಬೇಕು (ರೋಮಾ 2:7).

ದೇವರ ದಯೆಯಲ್ಲಿ ನೆಲೆಗೊಂಡಿರಬೇಕು (ರೋಮಾ 11:22).

ಪರಿಶುದ್ಧರೂ ನಿರ್ದೋಷಿಗಳೂ ನಿರಪರಾಧಿಗಳೂ ಆಗಿ ದೇವರ ಮುಂದೆ ನಿಲ್ಲಿಸಲ್ಪಡುವಂತೆ ನಂಬಿಕೆಯಲ್ಲಿ ನೆಲೆಗೊಳ್ಳಬೇಕು (ಕೊಲೊಸ್ಸೆ 1:22, 23).

ರಕ್ಷಣೆಯ ಭರವಸೆಗೋಸ್ಕರ ಕ್ರಿಸ್ತನ ಬೋಧನೆಗಳಲ್ಲಿ ನಿರತರಾಗಿರಬೇಕು (1 ತಿಮೊಥೆ 4:16).

ನಾವು ದೇವರ ಮನೆಯವರು ಎಂದು ಪರಿಗಣಿಸಲ್ಪಡುವದಕ್ಕಾಗಿ ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನು ಕಡೇ ತನಕ ದೃಢವಾಗಿ ಹಿಡಿದುಕೊಳ್ಳಬೇಕು (ಇಬ್ರಿಯ 3:6).

ಕ್ರಿಸ್ತನಲ್ಲಿ ಪಾಲುಗಾರರಾಗುವಕ್ಕಾಗಿ ಭರವಸವನ್ನು ಅಂತ್ಯದವರೆಗೂ ದೃಢವಾಗಿ ಹಿಡಿದುಕೊಳ್ಳಬೇಕು (ಇಬ್ರಿಯ 3:14-16).

ಧನ್ಯರಾಗುವದಕ್ಕಾಗಿ ಬಿಡುಗಡೆಯನ್ನುಂಟುಮಾಡುವ ಧರ್ಮಪ್ರಮಾಣದಲ್ಲಿ ನೆಲೆಗೊಂಡಿರಬೇಕು (ಯಾಕೋಬ 1:25).

ತಂದೆಯ ಮತ್ತು ಮಗನ ಅನ್ಯೋನ್ಯತೆಯಲ್ಲಿರುವದಕ್ಕಾಗಿ ಕ್ರಿಸ್ತನ ಉಪದೇಶಗಳಲ್ಲಿ ನೆಲೆಗೊಳ್ಳಬೇಕು (2 ಯೋಹಾನ 9).

ನಮಗೆ ನಂಬಿಕೆಯನ್ನು ಬಿಟ್ಟು ಹೋಗುವದರ ವಿರುದ್ಧವಾಗಿ ಸಹ ಎಚ್ಚರಿಸಲಾಗಿರುತ್ತದೆ. ಯೇಸುವು ಬಿತ್ತುವವನ ಸಾಮ್ಯದಲ್ಲಿ ಶೋಧನೆಯ ನಿಮಿತ್ತವಾಗಿ ಬಿದ್ದುಹೋಗುವದರ ಬಗ್ಗೆ ಉಲ್ಲೇಖಿಸಿದನು (ಲೂಕ 8:13). ಪೌಲನು ಅಯೋಗ್ಯನೆನಿಸಿಕೊಳ್ಳುವಂತಾಗಬಾರದು ಎಂಬದಕ್ಕಾಗಿ ತನ್ನ ದೇಹವನ್ನು ಜಜ್ಜಿ ಸ್ವಾದೀನಪಡಿಸಿಕೊಂಡನು (1 ಕೊರಿಂಥ 9:27). ಆತನು ಬಿದ್ದುಹೋಗುವದರ ವಿರುದ್ಧ ಎಚ್ಚರಿಸುವದಕ್ಕಾಗಿ ಇಸ್ರಾಯೇಲ್ಯರ ಉದಾಹರಣೆಯನ್ನು ಕೊಟ್ಟನು (1 ಕೊರಿಂಥ 10:6-12; ಇಬ್ರಿಯ 4:11). ಕ್ರೈಸ್ತರು ದೇವರ ಬಳಿಗೆ ಹಿಂದಿರುಗಿ ಬರಲಾಗದಷ್ಟು ದೂರವಾಗಿ ಬಿದ್ದುಹೋಗುವ ಸಾಧ್ಯತೆಯಿರುತ್ತದೆ (ಇಬ್ರಿಯ 6:6).

ನಾವು ದೇವರ ಕೃಪೆಯಿಂದ (ಗಲಾತ್ಯ 5:4) ಮತ್ತು ನಮ್ಮ ನಂಬಿಕೆಯಿಂದ ಬಿದ್ದು ಹೋಗುವ ಸಂಭಾವ್ಯತೆಯು ಇರುತ್ತದೆಂದು ಶಾಸ್ತ್ರಗಳು ಕಲಿಸುತ್ತವೆ (1 ತಿಮೊಥೆ 4:1). "ಭರವಸ"ಕ್ಕೆ ತಪ್ಪುವದು ಸಹ ನಾವು ಬಿದ್ದು ಹೋಗುವ ಇನ್ನೊಂದು ವಿಧವಾಗಿರುತ್ತದೆ (1 ತಿಮೊಥೆ 5:12). ನಾವು ದೃಢವಾಗಿ ನಿಲ್ಲಬೇಕು ಮತ್ತು ಸತ್ಯವನ್ನು ಬಿಟ್ಟು ಅತ್ತಿತ್ತ

ಹೋಗಬಾರದು.

ದೇವರಿಂದ ಪ್ರತಿಫಲವನ್ನು ಹೊಂದಿಕೊಳ್ಳಬೇಕೆಂದರೆ ನಾವು ಕಡೇ ವರೆಗೂ ತಾಳಿಕೊಳ್ಳಬೇಕು (ಮತ್ತಾಯ 24:13), ಬೇಸರಗೊಳ್ಳಬಾರದು (ಗಲಾತ್ಯ 6:9), ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕು (ಫಿಲಿಪ್ಪಿ 2:12), ಯೇಸುವಿಗೆ ವಿಧೇಯರಾಗಬೇಕು (ಇಬ್ರಿಯ 5:9), ಕಡೇ ತನಕ ನಂಬಿಗಸ್ತರಾಗಿರಬೇಕು (ಪ್ರಕಟನೆ 2:10), ಲೋಕಕ್ಕೆ ಸೋತು ಹೋಗಬಾರದು (2 ಪೇತ್ರ 2:20), ಮತ್ತು ದೇವರ ಚಿತ್ತವನ್ನು ಮಾಡಬೇಕು (1 ಯೋಹಾನ 2:15-17). ನಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಿಂದ ಅಳಿಸಿ ಹಾಕಲ್ಪಡದಂತೆ ಜೀವನದಲ್ಲಿ ಎದುರಾಗುವ ಕೆಟ್ಟಕಾರ್ಯಗಳನ್ನು ಜಯಿಸಬೇಕು (ಪ್ರಕಟನೆ 3:5). ಯಾರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿಲ್ಲವೋ ಅವರು ಬೆಂಕಿಯಲ್ಲಿ ಹಾಕಲ್ಪಡುವರು (ಪ್ರಕಟನೆ 20:15).

ಕ್ರೈಸ್ತರು ಬಿದ್ದುಹೋಗುವ ಮತ್ತು ನಾಶನಕ್ಕೊಳಗಾಗುವ ಅಪಾಯದಿಂದ ತಮ್ಮನ್ನು ಕಾಪಾಡಿಕೊಳ್ಳಬೇಕು. ನಿತ್ಯವಾದ ರಾಜ್ಯದಲ್ಲಿ ಪ್ರವೇಶ ಹೊಂದುವವೆಂಬ ಭರವಸೆಯನ್ನು ಹೊಂದಿಕೊಳ್ಳುವದಕ್ಕಾಗಿ, ನಾವು ನಮ್ಮ ನಂಬಿಕೆಗೆ ಕೆಲವೊಂದು ಸದ್ಗುಣಗಳನ್ನು ಕೂಡಿಸಿಕೊಳ್ಳಬೇಕಾಗಿರುತ್ತದೆ (2 ಪೇತ್ರ 1:5-11). ನಾವು ಈ ಕಾರ್ಯಗಳನ್ನು ಮಾಡುವದಾದರೆ, ನಾವು ಎಂದಿಗೂ ಬಿದ್ದು ಹೋಗುವದಿಲ್ಲ.

ನಮ್ಮ ವಿರುದ್ಧವಾಗಿ ಯಾವದೇ ದೋಷಾರೋಪಗಳು ಬರದ ರೀತಿಯಲ್ಲಿ ನಮ್ಮನ್ನು ದೇವರ ಮುಂದೆ ನಿರ್ದೋಷಿಗಳಾಗಿ ನಿಲ್ಲಿಸಲ್ಪಡುವದನ್ನು ಯೇಸುವು ಸಾಧ್ಯವಾಗಿಸಿರುತ್ತಾನೆ. ಹೇಗೂ, ಆತನು ಇದನ್ನು ಮಾಡುವಂತಾಗಲು, ನಾವು ನಂಬಿಕೆಯಲ್ಲಿ ನೆಲೆಗೊಂಡಿರಬೇಕು. ನಾವು ದೇವರ ಮಾರ್ಗದಲ್ಲಿನ ಜೀವನವನ್ನು ಅನುಸರಿಸದಿದ್ದಲ್ಲಿ, ಕಡಿದುಹಾಕಲ್ಪಡುವೆವು; ನಾವು ಆತನನ್ನು ಹಿಂಬಾಲಿಸುವದಾದರೆ, ನಾವು ಎಂದಿಗೂ ಬಿದ್ದು ಹೋಗುವದಿಲ್ಲ (ಯೋಹಾನ 15:6; ರೋಮಾ 11:22).

---

## ಅಡಿಟಿಪ್ಪಣಿಗಳು

[1]David M. Hay, *Colossians*, Abingdon New Testament Commentaries (Nashville: Abingdon Press, 2000), 68. ಈ ಅರ್ಥದಲ್ಲಿ ನಂಬಿಕೆ ಎಂಬುದು ವಿವಿಧ ವಾಕ್ಯಭಾಗಗಳಲ್ಲಿ ಬಳಸಲ್ಪಟ್ಟಿದ್ದು, ಅವುಗಳಾವವೆಂದರೆ ಎಫೆಸ 4:5; ಫಿಲಿಪ್ಪಿ 1:27; 2:17; 1 ತಿಮೊಥೆ 1:2; 3:9; 4:1; 5:8; 6:10; 21; 2 ತಿಮೊಥೆ 3:8; 4:7; Titus 1:1, 13; ಇಬ್ರಿಯ 12:2; ಯೂದನು 3.